Mr. SPEAKER.—I will give my ruling today alone.

Now the next item on the agenda may be taken up.

Papers laid on the Table.

Sri H. SIDDAVEERAPPA (Minister for Home).—I beg to lay on the Table a copy of Notification dated 28th October 1955, issued under the Motor Vehicles Act, 1939. (Cops placed in Legislature Library. *Vide* No. 33—L.A.)

DISCUSSION ON STATES REORGANISATION COMMISSION REPORT.

Mr. SPEAKER.—The next item on the agenda is, consideration of the States Re-organisation Commission report. Before taking up the report, I would invite the suggestions of the Hon'ble Members regarding two points. The time available at our disposal as per the schedule of programme is three days, and the time at our disposal would be not more than ten hours. We will sit for five hours every day and deduct half an hour for interval and one hour will be taken away for question time. That means only three hours and a half will be left at our disposal for discussion of the report. At that rate for three days, it comes to 10 hours. It is needless for me to state that every Hon'ble Member should be given an opportunity to express his views on this important matter. In view of this, I would like to know whether it is desirable to limit the time for each speaker or whether it is advisable to sit longer hours each day than the usual time of sitting.

Sri T. MARIAPPA (Mysore City North).—May I suggest one thing Sir? It is indeed very good of you to have raised this question at the earliest possible stage. Sir, I remember the Seshadri Committee Report was given more time for discussion. After all that was only an interim report which was mainly placed before this House, whereas the present report is of greater significance: the questions involved are of supreme importance. Therefore it is much better to allot more time in consultation with the Government for discussion of all the implications involved in the report so that the members of this House may participate in the discussion fully.

Sri J. MOHAMED IMAM (Jagalur).—Sir, I quite agree with Sri Mariappa. This is a very important issue which has been engaging the attention of the entire State and it has become a very controversial issue. So, I do not believe that any purpose would be served by imposing restriction upon the members. I think, ten days were allowed for the discussion of the Fact Finding Committee Report. Now it has come to a practical issue to express so many facts and so many points have to be thrashed out. I think the number of days allotted must be increased.

Originally the adjourned session was fixed on the 10th of this month. I do not know why it was again adjourned to this day all at once. Now the three days allotted for discussion, taking into consideration the importance of the subject, are wholly inadequate. I do not know why the Government are chary in allotting so many days for such an important matter. I feel that there should be no time restriction imposed on this matter. It may be left to the parties themselves to adjust among themselves as to who should be the speakers and other things. But in such important matters, there should not be any restriction. I feel the Government should increase the number of days.

Mr. SPEAKER.—Suppose we do not limit the time; even at that rate, it may not be possible to finish discussion on the report.

Sri J. MOHAMED IMAM.—We can over-work by one or two hours every day. As it is, Sunday also has been included. Some of us feel that we must be free on Sunday. Let the session be continued to go on in its own usual course. Let us have a holiday. If need be, let us sit for 15 minutes or half an hour extra every day, but there should not be any extra work. The Report has to be discussed threadbare. In fairness to all persons, it is necessary to allot more number of days.

*Sri A. BHEEMAPPA NAIK (Molakalmuru).—With due deference to the Leader of the Opposition, I would like to say that more time cannot be given for the members. There should be some restriction imposed on the members. Of course, the Leader of the Opposition should be given some more time. With regard to others, it should not be unduly restricted, but still it cannot be indefinite. Ten to 15 minutes would be quite all right for each speaker. It should not be indefinite anyway. The number of days will have to be increased to 5 days for discussion and that would be quite all right, Sir.

*Sri Mulka GOVINDA REDDY (Chitaldrug).—Mr. Speaker, Sir, during the discussion of the Seshadri Committee Report, many members participated in the debate, but no final decision was taken on that. No useful purpose would be served if we discuss this report for a month unless a decision of this House is taken. I would therefore suggest that instead of discussing this report for weeks together, a limit may be placed and the report may be discussed for three or four days and a final decision is arrived at. Otherwise, it will be a mockery of democracy and the Government will be failing in their duty if they do not bring a positive solution for this.

Sri V. M. MASCARENHAS (St. John's Hill).— I fully agree with the Leader of the Opposition that every member of this House must be given a fair opportunity to speak on this subject, but I do not agree with him that the time period must be indefinite and that a member must be allowed to speak from morning till evening. After all this Report is in the form of another Seshadri Committee Report. On this very subject, the members have spent nearly 60 hours discussing an identical theme. I do not think more than 20 minutes is necessary for a member if he confines himself to relevant points and to the subject. If the subject is very interesting, it is left to your discretion, Sir, to allow the speaker to go on for another five or ten minutes but, in any event, he cannot be allowed to speak for an indefinite period. The whole report may be discussed within five or six days.

Sri M. PALANIYAPPAN (Ulsoor).— The Fact Finding Committee Report, as some members stated, has not been taken note of very seriously. But in respect of this report on which we are going to discuss today, *viz*., the States Reorganisation Commission Report, I do not know whether copy of the proceedings will be sent to the Central Government or the decision of this House will be communicated. This is a very important issue, and most of the members have to advance their arguments either for or against the report. Unless an opportunity is given to the members of this House, they may not be able to express their views properly and there may be a chance of losing the ground. So, I feel Sir, that it is absolutely necessary that a free scope should be given to every member to express his views either for or against it, so that his views may be clearly understood by the Centre.

Mr. SPEAKER.—There are no two opinions regarding the chances to be given to the members. I want the Hon'ble Members to consider the time available at our disposal, and let me know whether it is not advisable to limit the time and whether it is not desirable to sit longer than the usual time on each day.

Sri H. K. VEERANNA GOWDH (Maddur).-I feel that there is no need to express our opinion whether to restrict the time or allow a member to speak indefinitely. Even if we allow him indefinitely to speak, I do not believe that he would go on speaking over and over again for the sake of mere speaking. To restrict the time would mean taking away the liberty of the member. All the 105 members will not take any time allotted for each of us. Suppose we say, 20 minutes for each member, every one of us will not take 20 minutes. Therefore without technically prescribing the time-limit, you, at your discretion, may allow each member to go on with his speech, of course, to the point, as long as he considers it necessary to speak. We must discuss this matter doing justice to the subject matter.

With regard to the working for longer hours, Sir, I am not for it. My colleagues here feel that it may not be possible to discuss the report within three days and Sri V. M. Mascarenhas has suggested that at least 5 or six days are needed. If you allow more number of days, there may not be any need to sit here for longer hours. Therefore, I suggest, we can sit only for the usual hours and I am sure the Government will not hesitate to allow more number of days for discussion. I understand that the Government have summoned this session for a shorter period in view of the fact that several important guests are arriving at Bangalore and accommodation is to be found for them. We have also been informed through the provisional programme, that the extension of the sittings of the Assembly will be decided later on. This would be done after seeing how far we have progressed with the subject during the present sitting. If any work is left over, that work could be continued after the Guests have gone. Once again the Government may summon the Assembly. Therefore it may not be necessary to extend the hours of sitting.

Mr. SPEAKER.—Is it the opinion of the Hon'ble Members that we can extend the session ?

Sri T. MARIAPPA.—Yes.

Mr. SPEAKER.—I want the opinion of the members whether we could extend the session and extend the discussion during the next sittings also.

Sri H.K. VEERANNA GOWDH.—Even according to the present programme, five or six days may not be sufficient for all the members to speak. Therefore we appeal to the Government to re-summon the Assembly after the 28th of this month, when the guests will have gone.

ಶ್ರೀ ಡಿ. ದೇವರಾಜ ಅರಸ್ (ಹುಣಸೂರು).—ಸ್ವಾಮಿ, ಈಗ ಕೊಟ್ಟಿರುವ ಮೂರು ದಿವಸಗಳನ್ನು ಹೆಚ್ಚಿಸಬೇಕೇ ಮತ್ತು ಮಾನ್ಯ ಸದಸ್ಯರು ಮಾತನಾಡತಕ್ಕ ಕಾಲವನ್ನು ಗೊತ್ತುಪಡಿಸಬೇಕೇ ಎಂಬ ವಿಚಾರದಲ್ಲಿ ಕೊಂಚಮಟ್ಟಿಗೆ ಶ್ರೀ ಮುಲ್ಕ ಗೋವಿಂದರೆಡ್ಡಿಯವರು ಹೇಳಿದಹಾಗೆ, ಮಾನ್ಯ ಸದಸ್ಯರು ಈ ವರದಿಯಮೇಲೆ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಯೇ? ಅಥವಾ ಫ್ಯಾಕ್ಟ್ ಫೈಂಡಿಂಗ್ ಕಮಿಟಿಯ ವರದಿಯಮೇಲೆ ಮಾತನಾಡಿದಮೇಲೆ ಈ ಸಭೆಯ 105 ಮಂದಿಯೂ ಬೇಕು, ಬೇಡ ಎಂದು ಹೇಳಿದ್ದರ ವರದಿಯನ್ನು ಮೂಟೆಕಟ್ಟಿ ಸಂಬಂಧಪಟ್ಟವರಿಗೆ ಕಳುಹಿಸಿದ ಹಾಗೆ ಮಾಡುತ್ತಾರೆಯೋ ಎಂಬುದರ ಮೇಲೆ ನಿಂತಿದೆಯೆಂದು ಹೇಳಬಹುದು. ಒಂದು ವೇಳೆ ಈ ಸಭೆಯವರು ಮಾತನಾಡಿದ್ದೆಲ್ಲವನ್ನೂ ಹಾಗೆಯೇ ಅಚ್ಚುಹಾಕಿಸಿ ಪ್ರತಿಯೊಬ್ಬರ ಭಾಷಣವನ್ನೂ ಕೇಂದ್ರಕ್ಕೆ ಕಳುಹಿಸುವ ಅಭಿಪ್ರಾಯಕ್ಕೆ ಈ ಸಭೆ ಬರುವುದಾದರೆ, ಆಗ ಕಾಲ ಪರಿಮಿತಿಯನ್ನು ಯಾವ ರೀತಿ ಗೊತ್ತುಮಾಡಬೇಕು, ಎಷ್ಟು ದಿವಸ ಬೇಕಾಗುತ್ತದೆಂಬುದನ್ನು ತೀರ್ಮಾನಮಾಡಬೇಕಾಗಿ ಬರುತ್ತದೆ. ಏಕೆಂದರೆ,

1-30 P.M.

ಈಗ ಪ್ರತಿಯೊಬ್ಬ ಮಾನ್ಯ ಸದಸ್ಯರೂ ಅವರವರ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಬೇಕಾಗಿ ಬರುತ್ತದೆ. ಹಾಗಿಲ್ಲದೆ ನಾವು ನಮ್ಮ ನಮ್ಮ ಅಭಿಪ್ರಾಯಗಳೇನಿರುತ್ತವೆ ಎನ್ನುವುದನ್ನು ಖಚಿತವಾಗಿ ತಿಳಿಸುವ ಬದಲು ಈ ವಿಚಾರದಲ್ಲಿ ಈ ಮಾನ್ಯ ಸಭೆ ಒಂದು ರೆಸಲ್ಯೂಷನ್ ರೂಪದಲ್ಲಿ ಇಡಬೇಕಾಗಿ ಬರತಕ್ಕಂಥ ಪ್ರಮೇಯ ಬರುವ ಪಕ್ಷಕ್ಕೆ, ಆಗ ಎಲ್ಲರೂ ಮಾತನಾಡುವುದಕ್ಕೆ ಇಷ್ಟಪಡದೆ ಇರಬಹುದು. ಆಗ ಇದಕ್ಕಾಗಿ ಅಷ್ಟೇನೂ ಹೆಚ್ಚು ಕಾಲ ಬೇಕಾಗುವುದಿಲ್ಲ. ಆದರೆ ಈವರೆಗೆ ನಾವುಗಳು ಈ ವಿಚಾರದಲ್ಲಿ ಇನ್ನೂ ಯಾವ ಒಂದು ತೀರ್ಮಾನಕ್ಕೂ ಬಂದಿಲ್ಲ. ಆದರೆ ಈಗ ಸರ್ಕಾರದವರೂ ಮತ್ತು ತಾವೂ ಸಹ ಈ ವಿಚಾರಕ್ಕೆ ಕ್ಲುಪ್ತ ಮಾಡಿರತಕ್ಕ ಕಾಲ ಸಾಲದು ಎಂದು ಕಂಡುಬರುತ್ತದೆ. ಆದಕಾರಣ ಈಗಾಗಲೇ ಶ್ರೀ ಎಚ್. ಕೆ. ವೀರಣ್ಣಗೌಡರೂ ಮತ್ತು ಶ್ರೀ ಟಿ. ಮರಿಯಪ್ಪನವರೂ ತಿಳಿಸಿರುವಂತೆ 2-3 ದಿವಸಗಳು ಈ ಚರ್ಚೆ ನಡೆದನಂತರ ಪುನಃ ಸಭೆಯನ್ನು ಈ ಬಗ್ಗೆ ಮುಂದುವರಿಸಬೇಕಾಗಿ ಬರುತ್ತದೆಂದು ಕಾಣುತ್ತದೆ. ಆದರೆ ಈ ದಿವಸ ಮಾತನಾಡತಕ್ಕ ಮಾನ್ಯ ಸದಸ್ಯರಿಗೆ ಹೇಗೆ ಕಾಲಪರಿಮಿತಿಯನ್ನು ಗೊತ್ತುಪಡಿಸಬೇಕೆಂಬ ಅಂಶವನ್ನು ತಾವೇ ಗಮನದಲ್ಲಿಟ್ಟುಕೊಂಡು ಈ ಕಾರ್ಯಕಲಾಪಗಳನ್ನು ಮುಂದುವರಿಸಬಹುದೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎ. ವಿ. ನರಸಿಂಹರೆಡ್ಡಿ (ಬೆಂಗಳೂರು ದಕ್ಷಿಣ ತಾಲ್ಲೂಕು).—ಈ ವಿಚಾರದಲ್ಲಿ ಸರ್ಕಾರದವರ ಅಭಿಪ್ರಾಯವೇನೆಂಬುದನ್ನು ತಿಳಿಸಿದರೆ ನಾವು ಅದರಮೇಲೆ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅನುಕೂಲವಾಗುತ್ತದೆ. ಆದರೆ ಅವರ ನಿರ್ದಿಷ್ಟವಾದ ನಿಲುವು ಏನು ಎನ್ನುವುದೇ ತಿಳಿಸದಿರುವಾಗ ನಾವು ಈ ಬಗ್ಗೆ ನಮ್ಮ ಅಭಿಪ್ರಾಯಗಳನ್ನು ಹೇಗೆ ಕೊಡಲು ಸಾಧ್ಯವಾಗುತ್ತದೆ?

Mr. SPEAKER.—Then the point will arise whether they are going to take votes or not. That is a different thing. Now at least I want the guidance of the House so far as the limitation of time is concerned. One or two Hon'ble Members stated that the Speaker can be entrusted with the allotment of time, but I must frankly admit that since this is a very controversial matter, the limitation of time should not be entrusted to me. At least if the House gives a guidance to me so far as the fixing of the time-limit is concerned, within that I can use my discretion and allot some time. Otherwise, some Hon'ble Members may go under the misapprehension that I am going to cut short the arguments or

(MR. SPEAKER.)

the speeches unnecessarily. Therefore, I want the guidance of the House in this matter before the motion is taken up.

*Sri M. LINGANNA (Nanjangud).—First of all, I want to know whether the Government is able to extend or not the number of days for discussion. Without that, our discussion, or submitting our views so far as the limitation or otherwise of the time is concerned, cannot be of any avail. That is my submission. If the Government is going to extend the number of days to five or six days, then probably the question of limiting the time would arise; then we could suggest that such and such time would be fixed for each member to speak. Without that assurance or reaction by the leader of the Party, probably we cannot give any useful suggestion on the question of limitation of time.

Mr. SPEAKER.—Taking it for granted that three days are extended to five days, even then we will have to limit the time.

Sri M. LINGANNA.—In that case, what was suggested by Sri Veeranna Gowdh is almost acceptable to all of us. It may look a bit difficult for the Chair to cut short the speech of a particular member or stop him. But, as is suggested by him, it all depends upon the way and the manner in which and the cogency with which a member speaks on the subject-matter, which is the guiding principle for the Chair to limit the time or cut short the speech. In that case, mere repetition also would be cut short by the Chair. The Chair is all powerful to call to order any member who repeats his arguments. Such being the case, it should be left to the discretion of the Chair to call to order a member who is going away from the subject-matter or probably repeating his arguments. If a member were to advance good arguments, probably the Speaker can allot more time for him than is usual for other members. That arrangement is, I think, the best one, instead of limiting the time to 15 minutes, 20 minutes or 25 minutes.

ಶ್ರೀ ಬಿ. ವೈ. ನೀರೇಗೌಡ (ಪಾಂಡವಪುರ).—ಸ್ವಾಮಿ, ಕಳೆದ ನಾಲ್ಕು ವರ್ಷಗಳಿಂದಲೂ ಪ್ರತಿಯೊಂದು ಅಧಿವೇಶನದಲ್ಲೂ ಈ ವಿಚಾರವಾಗಿ ಮಾತನಾಡುತ್ತಲೇ ಇದ್ದೇವೆ. ನಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಲೇ ಇದ್ದೇವೆ. ರಾಜಪ್ರಮುಖರ ಭಾಷಣದ ಮೇಲೂ, ಅದಾದನಂತರ ಜನರಲ್ ಬಡ್ಜೆಟ್ ಭಾಷಣದ ಕಾಲದಲ್ಲೂ, ಅನಂತರ ನಿರ್ಣಯ ಇತ್ಯಾದಿಗಳ ಚರ್ಚೆಯ ಕಾಲದಲ್ಲೂ ಯಾವ ರೀತಿ ಮಾತನಾಡುತ್ತಿರುತ್ತೇವೆ ಎನ್ನುವುದೆಲ್ಲಾ ತಿಳಿದಿರತಕ್ಕದ್ದೇ ಆಗಿದೆ. ಕೆಲವರು ಈಗೇನೋ ಒಂದು ಕಾಲಪರಿಮಿತಿಯನ್ನು ಗೊತ್ತುಮಾಡಿ ಎಂದು ಹೇಳುತ್ತಿದ್ದಾರೆ. ಯಾರ್ಯಾರು ಚೆನ್ನಾಗಿ ಮಾತನಾಡುತ್ತಾರೋ ಅವರಿಗೆ ಕೊಡತಕ್ಕ ಕಾಲದ ಮಧ್ಯದಲ್ಲೇ ಚೆನ್ನಾಗಿ ಮಾತನಾಡದಿರತಕ್ಕವರಿಗೂ ಕೂಡ ಸ್ವಲ್ಪಮಟ್ಟಿಗೆ ಕಾಲಾವಕಾಶ ಕೊಟ್ಟುಕೊಂಡು ಹೋಗುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಈಗ ಬಂದಿರುವ ಕಥೆ ಬಹಳ ದೊಡ್ಡದು. ಭಾರತದಲ್ಲಿರುವ ಕಥೆಯನ್ನೆಲ್ಲಾ ಐದೇ ನಿಮಿಷದಲ್ಲಿ ಹೇಳಬೇಕೆಂದು ಯಾರೋ ಒಬ್ಬ ವಿಜ್ಞಾನಿ ಕೇಳಿದರಂತೆ. ಅದಕ್ಕೆ ಯಾರೋ ಒಬ್ಬ ಖಿಲಾಡಿ ಐದು ನಿಮಿಷದಲ್ಲೇ ಆ ಭಾರತವನ್ನೆಲ್ಲಾ ಪೂರೈಸುತ್ತೇನೆಂದು ಹೇಳಿ—"ಕೃಷ್ಣ ಸಾರಥಿಯಾದ, ಅರ್ಜುನ ರಥಹತ್ತಿದ, ಕೌರವರ ಕುಲ ಸಂಹಾರಮಾಡಿದ" ಎಂದು ಹೇಳಿದನಂತೆ. ಇಲ್ಲಿಯತನಕ ಆ ಶೇಷಾದ್ರಿ ವರದಿಯೇ ಬಹಳ ದೊಡ್ಡದು ಎಂದು ನಾನು ಹೇಳುತ್ತಿದ್ದೆ. ಈಗ ಮತ್ತೆ ಕೆಲವರು ಈಗ ಬಂದಿರುವ ವರದಿ ಅದಕ್ಕಿಂತಲೂ ದೊಡ್ಡದು ಎಂದು ಹೇಳುತ್ತಿದ್ದಾರೆ. ಆದರೆ ಈ ಎರಡು ವರದಿಗಳಲ್ಲಿ ಏನು ಹೇಳಿದೆ ಎನ್ನುವುದನ್ನು ನಾವು ಓದಿ ಅರ್ಥಮಾಡಿಕೊಂಡು ಮಾತನಾಡಬೇಕಾಗಿದೆ. ಸಾಮಾನ್ಯವಾಗಿ ಮಾತನಾಡತಕ್ಕಂಥ ನನಗೇನೇ ಸುಮಾರು ಒಂದು ಇಡಿ ದಿವಸವೆಲ್ಲಾ ಕಾಲ ಬೇಕಾಗಿರುವಾಗ ಇನ್ನು ನನಗಿಂತಲೂ ಹೆಚ್ಚಾಗಿ ಮಾತನಾಡತಕ್ಕಂಥ ಮಹನೀಯರು ಅನೇಕರಿರುವುದರಿಂದ ಕಾಲಪರಿಮಿತಿ ಮಾಡುವುದು ಸರಿಯಲ್ಲ. ಈ ಕಥಾನಾಯಕಿಯನ್ನು ತಂದಿರತಕ್ಕವರು ಸೇರಬೇಕು. ಕಥಾನಾಯಕಿ—ಕಥಾನಾಯಕರ ವಾದ ಎಲ್ಲಿಗೆ ನಿಲ್ಲುತ್ತದೆ ಎಂಬುದನ್ನು ನಾವಿನ್ನೂ ನೋಡಬೇಕಾಗಿದೆ. ಆದಕಾರಣ ಈ ವಿಚಾರದಲ್ಲಿ ಕಾಲಪರಿಮಿತಿ ಮಾಡಬಾರದೆಂದು ಹೇಳುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ನಮಗೆ ಅವಕಾಶ ಕೊಟ್ಟರೆ ಒಂದು ವಾರವೇ ಏಕೆ ಒಂದು ತಿಂಗಳು ಕಾಲವಾದರೂ ಮಾತನಾಡಬಹುದು. ಆದರೆ ಈಗ ಸರ್ಕಾರದವರು ಕೇವಲ ಮೂರು ದಿವಸಗಳನ್ನು ಮಾತ್ರ ಈ S. R. C. ವರದಿಯ ಬಗ್ಗೆ ಚರ್ಚೆ ನಡೆಸಲು ನಿರ್ಧರಮಾಡಿದ್ದಾರೆ. ಕೇವಲ ಪ್ರತಿಯೊಬ್ಬ ಸದಸ್ಯರಿಗೂ 10-15 ನಿಮಿಷ, ಇನ್ನೂ ಕೆಲವರಿಗೆ ಅರ್ಧ ಗಂಟೆ ಹೀಗೆ ಕಾಲಾವಕಾಶ ಕೊಡಬೇಕಾಗಿದ್ದರೂ ಕಡೇಪಕ್ಷ ಈ ಚರ್ಚೆ ಒಂದು ವಾರ ಹಿಡಿಯುತ್ತದೆ. ಆದರೆ ಈಗ ಸಭೆಯನ್ನು ಕರೆದಿರುವ ಐದು ದಿವಸಗಳೂ ಪೂರ್ತಿಯಾಗಿ ಈ ಚರ್ಚೆಗೇ ಕ್ಲುಪ್ತಮಾಡಿದರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚೆನ್ನರಾಯಪಟ್ಟಣ).—ಸ್ವಾಮಿ, ಒಬ್ಬೊಬ್ಬ ಮಾನ್ಯ ಸದಸ್ಯರಿಗೂ ತಾವು ಕೊನೇಪಕ್ಷ 20 ನಿಮಿಷಗಳ ಕಾಲಾವಕಾಶ ಕೊಡುತ್ತೀರೆಂದು ಇಟ್ಟುಕೊಂಡಾಗ್ಯೂ ಅದೂ ಸಾಲದು, ಕೆಲವರಿಗೆ ಅವರು ವ್ಯಕ್ತಪಡಿಸಬಹುದಾದ ವಿಷಯಗಳನ್ನು ವಿವರವಾಗಿ ವ್ಯಕ್ತಪಡಿಸಲು 20 ನಿಮಿಷಗಳ ಕಾಲವನ್ನಾ

ದರೂ ಕೊಡಲೇಬೇಕು ಆ ದಾವಾಷಾ ಪ್ರಕಾರ ಈಗ ಈ ಸಭೆಯಲ್ಲಿರುವ ಮಾನ್ಯ ಸದಸ್ಯರ ಸಂಖ್ಯೆಗನುಗುಣವಾಗಿ ನೋಡಿ ಲೆಕ್ಕ ಹಾಕಿದರೆ 10 ದಿವಸಗಳ ಕಾಲ ಈ ಸಭೆಯು ಈ ಚರ್ಚೆಯನ್ನು ನಡೆಸಬೇಕಾಗುತ್ತದೆ. ಇದನ್ನು ಕೇವಲ ಐದು ದಿವಸಗಳಲ್ಲಿ ಮುಗಿಸುವುದಕ್ಕೆ ಸಾಧ್ಯವಿಲ್ಲ. 8-10 ದಿವಸಗಳಾದರೂ ಬೇಕೇಬೇಕು. ಶ್ರೀ ಎಚ್. ಕೆ. ವೀರಣ್ಣಗೌಡರು ಈ ಆರು ದಿವಸಗಳ ತನಕ ಇದರ ಚರ್ಚೆ ನಡೆಸಿ ಅನಂತರ ಇದನ್ನು ಅಡ್ಜರ್ನ್ ಮಾಡಿ ಪುನಃ ಮತ್ತೊಮ್ಮೆ ಈ ಚರ್ಚೆಗೆ ಕಲೆಯೋಣ ಎಂದು ಸೂಚನೆ ಕೊಟ್ಟಿದ್ದಾರೆ. ಅಂತೂ ನಾವು ಇಂದಲ್ಲ ನಾಳೆ ಆದರೂ ಈ ವಿಚಾರದಲ್ಲಿ ಒಂದು ಟಿಶ್ಚಿರು ತೀರ್ಮಾನವನ್ನು ಕೈಗೊಳ್ಳಲೇಬೇಕು. ಹಾಗೆ ನಾವು ಮಾಡದೆ ಹೋದರೆ ನಮ್ಮ ಅಭಿಪ್ರಾಯ ಈ ವಿಚಾರದಲ್ಲಿ ಯಾವ ರೀತಿ ಇರುತ್ತದೆ ಎಂಬುವುದು ನಮ್ಮ ಮೇಲಿನವರಿಗೆ ಗೊತ್ತಾಗುವುದಿಲ್ಲ. ತಾವು ಕೆಲವರಿಗೆ 10 ನಿಮಿಷ, ಕೆಲವರಿಗೆ 20 ನಿಮಿಷ, ಮತ್ತೆ ಕೆಲವರಿಗೆ ಅರ್ಧ ಗಂಟೆ ಕಾಲಾವಕಾಶ ಕೊಟ್ಟರೆ, 10 ದಿವಸಗಳ ಕಾಲಾವಕಾಶವಂತೂ ಬೇಕೇಬೇಕು. ಮೊದಲು ಒಂದು ಕಾಲಪರಿಮಿತಿಯನ್ನು ತೀರ್ಮಾನಮಾಡಿದ ನಂತರ ಇದರ ಚರ್ಚೆಯನ್ನು ಇಟ್ಟುಕೊಳ್ಳುವುದು ಒಳ್ಳೆಯದೆಂದು ಸೂಚಿಸುತ್ತೇನೆ.

Mr. SPEAKER.—I want the opinion of the Government.

Sri J. MOHAMED IMAM (Jagalur).—Before that, I would like to get another clarification. I would like to know what purpose is served by a discussion of the Report before us, whether it is only of an academic nature or whether our views are going to be sent to the Centre, whether our speeches are going to be sent for their reference and if a decision is forced in this House. If the Government let us know definitely what is their purpose, then I think we can gauge the importance of our discussion and they can let us know the time needed for each member to speak. Otherwise if a discussion proves to be the repetition of the discussion on the Fact-Finding Committee Report, then I think many members may not take part in the discussion. This point may be answered by the Leader of the House.

Mr. SPEAKER.—I want to know from the Government whether the number of days allotted now would be extended and if so, to how many days, because we have to limit the time and cut short the debate. Some Hon'ble Members also want to know whether the session can be further adjourned.

Sri K. HANUMANTHAIYA.—Sir, now we have had the benefit of the views of the members on the subject. There is a well-known method of deciding these things. The Leader of the House, the Leader of the Opposition, the Speaker and a few other members can informally sit and decide what should be the best course to adopt. That may be done tomorrow. In the meanwhile, discussion can go on.

Mr. SPEAKER.—Then, consideration of the report of the States Reorganisation Commission may now be taken up.

1-40 P.M.

Motion to consider.

Sri K. HANUMANTHAIYA (Chief Minister).—Sir, I beg to move:

> "That the Report of the States Reorganisation Commission be taken into consideration."

ಈ ದಿವಸ ಮೈಸೂರು ದೇಶದ ಚರಿತ್ರೆಯಲ್ಲಿ ಬಹಳ ಮಹತ್ವಪೂರಿತವಾದ ದಿವಸ. ಇಂಥ ಸನ್ನಿವೇಶ ಬಹುಶಃ 300, 400 ವರ್ಷಗಳಿಗೊಮ್ಮೆ ಬರತಕ್ಕಂಥದ್ದು. ರಾಜ್ಯಗಳು ಉದಿಸುವುದು, ಅಳಿಯುವುದು ಅಥವಾ ಹೊಸ ರಾಜ್ಯಗಳು ಸೃಷ್ಟಿಯಾಗುವುದು ಇವೆಲ್ಲಾ ಒಂದು ಸೃಷ್ಟಿ ನಿಯಮಗಳ ಮೇಲೆ ನಡೆದುಕೊಂಡು ಬರುತ್ತಿವೆ. ಈ ಸೃಷ್ಟಿ ನಿಯಮದ ನಿರ್ವಹಣೆಯ ಹೊಣೆಗಾರಿಕೆಗೆ ನಾವೆಲ್ಲರೂ ತಲೆಬಾಗಬೇಕಾಗಿದೆ. ಇಂಡಿಯಾ ದೇಶ ಈ ದಿವಸ ಇರುವಂತೆ ಒಂದೇ ಸರ್ಕಾರಕ್ಕೆ ಆಸೇತು ಹಿಮಾಚಲಪರ್ಯಂತ ಸೇರಿದ್ದಂಥ ಕಾಲವೇ ಇರಲಿಲ್ಲ. ಇಂಥಾದ್ದು ಉಂಟಾಗಿರುವುದು ಭಾರತದ ಚರಿತ್ರೆಯಲ್ಲಿ ಇದೇ ಮೊದಲನೆಯ ಸಲ. ಈ ಮಹಾ ಘಟನೆಯುಂಟಾದ ಮೇಲೆ ಇಂಡಿಯಾ ದೇಶದ ಒಳಗೂ ಅನೇಕ ಘಟನೆಗಳುಂಟಾಗಿವೆ. ಒಂದು ದೊಡ್ಡ ಮಳೆ ಬಂದರೆ ಹಳ್ಳಿಗಳಲ್ಲಿ ನದಿಗಳಲ್ಲಿ ಹೇಗೆ ನೀರಿನ ಪ್ರವಾಹ ತುಂಬಿ ಹರಿಯುತ್ತದೆಯೋ ಹಾಗೆಯೇ ಮಾನವನ ಚರಿತ್ರೆಯಲ್ಲಿ ಇಂತಹ ಮಹಾ ಘಟನೆಗಳು ನಡೆಯುವಾಗ ಜನ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಬದಲಾವಣೆಗಳು ತುಂಬಿತುಳುಕಿ ಹರಿಯತಕ್ಕದ್ದು ಸಹಜ, ಸ್ವಾಭಾವಿಕ. ಇದು ಮಹತ್ವಪೂರಿತವಾದ ದಿವಸವೂ ಮತ್ತು ವಿಷಯವೂ ಆಗಿರುವುದರಿಂದ ನಾನಾದರೂ ಬಯಸುತ್ತೇನೆ:—ಇಂದು ಪಕ್ಷಗಳ ಶಿಸ್ತಿನ ಸಂಕೋಲೆಗೆ ಸಿಕ್ಕಿ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕಾಗಿಲ್ಲವೆಂದು. ಹಿಂದೆ ಅನೇಕ ಸಮಸ್ಯೆಗಳನ್ನು ನಾವು ಈ ಸಭೆಯಲ್ಲಿ ಚರ್ಚೆಮಾಡಿದ್ದೇವೆ. ಉದಾಹರಣೆಗಾಗಿ, ಕೋಲಾರದ ಚಿನ್ನದ ಗಣಿ ಪ್ರಶ್ನೆ. ಕೋಲಾರದ ಚಿನ್ನದ ಗಣಿ ಪ್ರಶ್ನೆ ಬಂದಾಗ ಯಾವ ಪಕ್ಷದವರಾಗಲಿ, ಸದಸ್ಯರಾಗಲಿ ಪಕ್ಷಾತೀತವಾದ ಪ್ರಶ್ನೆಯೆಂದು ಪರಿಗಣಿಸಿ ಚರ್ಚೆಮಾಡಿ ಒಮ್ಮತದ ತೀರ್ಮಾನಕ್ಕೆ ಬಂದೆವು. ದೇಶದ ಹಿತದೃಷ್ಟಿಯಿಂದ ಇಂತಹ ಸತ್ಸಂಪ್ರದಾಯವನ್ನು ಸ್ಥಾಪಿಸಿರತಕ್ಕ ಈ ಸಭೆ ಆ ಸಂಪ್ರದಾಯವನ್ನೇ ಈ ಮಹಾಪ್ರಶ್ನೆಗೂ ಅನ್ವಯಿಸುತ್ತದೆ ಎಂಬುದು ನನ್ನ ನಂಬಿಕೆ ಮತ್ತು ನನ್ನ ಸವಿನಯ ಪ್ರಾರ್ಥನೆ. ಇದು ಒಂದು ಪಕ್ಷದ ಪ್ರಶ್ನೆಯಲ್ಲ;

(SRI K. HANUMANTHAIYA.)

ಇದು ಮೈಸೂರು ದೇಶದಲ್ಲಿ ವಾಸಮಾಡುತ್ತಿರುವ ಜನರ ಪ್ರಶ್ನೆಯೂ ಅಲ್ಲ. ಪಕ್ಷಗಳನ್ನು ಮೀರಿ ಯಾವ ರೀತಿ ಕೆಲವು ಪ್ರಶ್ನೆಗಳು ತಮ್ಮ ಪ್ರಭಾವವನ್ನು ಬೀರುತ್ತವೆಯೋ ಅದೇ ರೀತಿ ಈ ಪ್ರಶ್ನೆ ಮೈಸೂರಿನ ಎಲ್ಲೆಕಟ್ಟಿನಲ್ಲಿರತಕ್ಕ ಜನರನ್ನೂ ಮೀರಿ ಅಖಿಲ ಇಂಡಿಯಾ ಪ್ರಶ್ನೆಯಾಗಿ ಪರಿಣಮಿಸಿದೆ ಎನ್ನುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಆದ್ದರಿಂದ ಪಕ್ಷದ ಶಿಸ್ತನ್ನು ಈದಿವಸ ನಾವು ಸಾಂಪ್ರದಾಯಿಕವಾಗಿ ಪರಿಪಾಲಿಸದೇ ಇದ್ದರೂ ದೇಶದ ಹಿತದೃಷ್ಟಿಯಿಂದ ದೇವರ ಪ್ರೇರೇಪಣೆ ಎಂತಿದೆಯೋ ಆ ರೀತಿ ಮಾತನಾಡತಕ್ಕ ಅವಕಾಶವಿದೆ. ನಾನು ಮಾತನಾಡುತ್ತಾ ಇರುವಾಗ ಕಾಂಗ್ರೆಸ್ ಪಕ್ಷದ ನಾಯಕನಾಗಿ ಅಥವಾ ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ಮಾತನಾಡುತ್ತಾ ಇಲ್ಲ.

ಈ ಸಭೆಯ ಸಂಪ್ರದಾಯದ ಪ್ರಕಾರ ನನಗೆ ಎರಡು ಸ್ಥಾನಗಳಿವೆ. ನಾನು ಪಕ್ಷದ ನಾಯಕನೂ ಹೌದು; ಈ ಸಭೆಯ ನಾಯಕನೂ ಹೌದು. ನಾನು ಈ ದಿವಸ ಈ ಸಭೆಯ ನಾಯಕನಾಗಿ ಮಾತನಾಡುತ್ತಾ ಇದ್ದೇನೆ. ನನ್ನ ಅಭಿಪ್ರಾಯವನ್ನು ಕೆಲವು ಮಂದಿ ಸದಸ್ಯರು ಒಪ್ಪದೇ ಇರಬಹುದು. ನಾಳೆಯ ದಿವಸ ಒಪ್ಪುತ್ತಾರೆ ಎನ್ನುವ ನಂಬಿಕೆ ನನಗಿದೆ. ಆದರೆ ತಮ್ಮೆಲ್ಲರ ಪರವಾಗಿ ನಾನು ಈ ದಿವಸ ನನ್ನ ಅಭಿಪ್ರಾಯವನ್ನು ಹೇಳಬೇಕೆಂದು ಬಯಸುತ್ತೇನೆ. ಅದೇ ರೀತಿಯಾಗಿ ಪ್ರತಿಪಕ್ಷದ ನಾಯಕರೂ ಕೂಡ ಇದು ಒಂದು ಪಕ್ಷದ ಪ್ರಶ್ನೆ ಎಂದು ತಿಳಿಯದೆ, ಇಡೀ ಭರತಖಂಡದ ಜಟಿಲ ಸಮಸ್ಯೆಗಳನ್ನು ಬಿಡಿಸತಕ್ಕ ಉದ್ಯಮದಲ್ಲಿ ಇದು ಒಂದು ಪ್ರಯತ್ನ ಎಂದು ಪರಿಗಣಿಸುತ್ತಾರೆಂದು ನಂಬಿದ್ದೇನೆ. ಆದ್ದರಿಂದ ನಾವೆಲ್ಲರೂ ಅತಿ ವಿಶಾಲ ಭಾವನೆಯಿಂದ ಸತ್ಯಮನಸ್ಕರಾಗಿ ಈ ಪ್ರಶ್ನೆಯನ್ನು ಪರಿಶೀಲಿಸಬೇಕು.

ಮೈಸೂರು ದೇಶದಲ್ಲಾದರೂ ಕೂಡ ಈ ವಿಚಾರದಲ್ಲಿ ಬಹಳ ಕಳವಳವುಂಟಾಗಿದೆ; ಭಿನ್ನಾಭಿಪ್ರಾಯಗಳು ಮೂಡಿ, ಪರಸ್ಪರ ವಿರಸ ಉಂಟಾಗುವ ಸಂಭವ ಒದಗಿದೆ. ಪ್ರಜಾಪ್ರಭುತ್ವದಲ್ಲಿ ವಿರಸ, ದ್ವೇಷ ಇತ್ಯಾದಿ ಅಕ್ರಮ ಕಾರ್ಯಗಳು ನಡೆಯದೆ ಪ್ರತಿ ಸಮಸ್ಯೆಯನ್ನೂ ಸಮರಸ ಭಾವನೆಯಿಂದ ಪರಿಶೀಲಿಸಿ ಬಗೆಹರಿಸಬೇಕು. ಇತರ ಬೇರೆ ವರ್ಗದ ಪ್ರಭುತ್ವಗಳಲ್ಲಿ ಅಂದರೆ, ಡಿಕ್ಟೇಟರ್‌ಷಿಪ್, ಪ್ರೊಲಿಟೇರಿಯನ್ ಡಿಕ್ಟೇಟರ್‌ಷಿಪ್, ಆಟೊಕ್ರೆಸಿ ಅಥವಾ ಮಾನಾರ್ಕಿ ಇಂತಹ ಪ್ರಭುತ್ವಗಳಲ್ಲಿ ಈ ಪ್ರಶ್ನೆಗಳನ್ನು ಬಗೆಹರಿಸಬೇಕಾದ ಅಧಿಕಾರ ಒಬ್ಬನ ಕೈಯಲ್ಲಿರುತ್ತದೆ; ಅಥವಾ ಕೆಲವರ ಕೈಯಲ್ಲಿರುತ್ತದೆ. ಈ ಅಧಿಕಾರಕ್ಕೆ ತಲೆಬಾಗದೆ ಇರುವವರ ತಲೆಯನ್ನು ಬಹುಶಃ ತೆಗೆಯುತ್ತಾರೆ. ಆದರೆ ಪ್ರಜಾಪ್ರಭುತ್ವದಲ್ಲಿ ಎಂತಹ ಪ್ರಶ್ನೆ ಬಂದರೂ ಸಮಾಲೋಚನೆಯಿಂದ, ಚರ್ಚೆಯಿಂದ, ಪರಿಹಾರ ಮಾಡಿಕೊಳ್ಳಬೇಕಾಗಿದೆ. ಈ ಸನ್ಮಾರ್ಗವನ್ನು ತೋರಿಸಿಕೊಡತಕ್ಕ ಪ್ರಜಾಪ್ರಭುತ್ವವನ್ನು ಸ್ಥಾಪಿಸಿ, ಬೆಳಸಿ, ಒಲಿಸಿಕೊಂಡು ಬರತಕ್ಕದ್ದು ವ್ಯಕ್ತಿಗಳಿಗೂ, ಪಕ್ಷಗಳಿಗೂ, ದೇಶಕ್ಕೂ ಶ್ರೇಯಸ್ಕರ ಎಂದು ದೃಢವಾದ ನಂಬಿಕೆ ಇರುವವರು ನಾವು. ಈ ದೃಢವಾದ ನಂಬಿಕೆಯ ಮೇಲೆ ನಮ್ಮ ಇಂಡಿಯನ್ ಕಾನ್‌ಸ್ಟಿಟ್ಯೂಷನ್ ರಚನೆಯಾಗಿದೆ. ಆ ಕಾನ್‌ಸ್ಟಿಟ್ಯೂಷನ್ನಿಗೆ ನಾವೆಲ್ಲರೂ ಪ್ರಮಾಣವಚನವನ್ನು ಸ್ವೀಕರಿಸಿದ್ದೇವೆ. ಆ ಪ್ರಮಾಣವಚನವನ್ನು ಸ್ವೀಕರಿಸುವಾಗ ಯಾವ ಮೆಂಟಲ್ ರಿಸರ್ವೇಷನ್ ಅಥವಾ ಮನಸ್ಸಿನ ಹಿಂಬದಿಯಲ್ಲಿ ಯಾವುದನ್ನೂ ಇಟ್ಟುಕೊಂಡು ಪ್ರಮಾಣವಚನವನ್ನು ಸ್ವೀಕರಿಸಿಲ್ಲ. ಆದ್ದರಿಂದ ಈ ದಿವಸ ಪಕ್ಷಗಳೇ ಆಗಲಿ ವ್ಯಕ್ತಿಗಳೇ ಆಗಲಿ ಈ ಸಮಸ್ಯೆಯನ್ನು ಚರ್ಚೆಯಿಂದ, ಸಮಾಲೋಚನೆಯಿಂದ, ವಾದದಿಂದ, ಪರಿಹರಿಸಿಕೊಳ್ಳಬೇಕೇ ಹೊರತು ಮತ್ತಾವ ಮಾರ್ಗವನ್ನೂ ಹಿಡಿಯಬಾರದು; ಹಿಡಿಯತಕ್ಕದ್ದು ಸೂಕ್ತವೂ ಅಲ್ಲ. ಹಾಗೆ ಹಿಡಿಯತಕ್ಕದ್ದು ನಾವು ಸ್ವೀಕರಿಸಿರತಕ್ಕ ಪ್ರಮಾಣವಚನಕ್ಕೆ ಅನುಗುಣವಾಗಿಲ್ಲ ಎಂಬು ನನ್ನ ಬಿನ್ನಹ.

ನನ್ನ ವಿಷಯವಾಗಿ ಕೆಲವು ಮಾತುಗಳನ್ನಾಡುತ್ತೇನೆ. ರಾಜಕೀಯದಲ್ಲಿ ಈಗ ಸುಮಾರು 20 ವರ್ಷಗಳಿಂದಲೂ ಕೈಲಾದ ಸೇವೆಯನ್ನು ಸಲ್ಲಿಸುತ್ತಿದ್ದೇನೆ. ಮೊದಲು ಭಾಷಾವಾರು ಪ್ರಾಂತಗಳ ವಿಚಾರದಲ್ಲಿ 1941ನೆಯ ಇಸವಿಯಲ್ಲಿ, ಹಿಂದೆ ಇದ್ದ ಪ್ರಜಾಪ್ರತಿನಿಧಿ ಸಭೆಯಲ್ಲಿ ಮಾತನಾಡಿದ್ದೇನೆ. ಆ ಪ್ರಜಾಪ್ರತಿನಿಧಿ ಸಭೆಯಲ್ಲಿ ಕರ್ಣಾಟಕ ಏಕೀಕರಣವಾಗಬೇಕು ಎಂಬ ಪ್ರಶ್ನೆ ಬಂತು. ಆದರೆ ಕರ್ಣಾಟಕ ಏಕೀಕರಣವಾದಿಗಳು ಆಗ ಅನುಸರಿಸಿರತಕ್ಕ ಮಾರ್ಗ ಅಷ್ಟು ಸೂಕ್ತವಾದುದಲ್ಲ, ಅದನ್ನು ಕಾಲಕ್ರಮೇಣ ಮಾಡೋಣ ಎಂದು ಹೇಳಿದ್ದೇನೆ. ಅದು ಅಚ್ಚಾಗಿದೆ. ಅನಂತರ ರಾಜಕೀಯ ರಂಗದಲ್ಲಿ ಕಾಂಗ್ರೆಸ್ ಸದಸ್ಯನಾಗಿ ಏಕೀಕರಣಕ್ಕೆ ನಾನೂ ಭಾಗಿಯಾಗಿದ್ದೇನೆ.

Sri A. V. NARASIMHA REDDY (Bangalore South).—I rise to a point of order. The Leader of the House has been stating that he is not speaking on behalf of the House as a Leader. But he states that he is speaking on his own behalf. Under the circumstances, Sir, I request the Chair to give a ruling whether such a speech will have a place at this juncture or not.

Mr. SPEAKER.—The Hon'ble Member is aware that any Hon'ble Member, whether he is a minister or not, can speak on his own behalf. He may not give the view which represents his party or the House. But he is entitled to speak on his own behalf.

Sri A. BHEEMAPPA NAIK (Molakalmuru).—The Hon'ble Chief Minister said that he is speaking as the Leader of the House.

Mr. SPEAKER.—He is also entitled to express his own views.

Sri A. V. NARASIMHA REDDY.—At the beginning of his speech he said that as a Leader of the House he was introducing this Report for discussion. But while he went on speaking, Sir, he stated that he was speaking on his own self and not as a Leader. I am unable to reconcile to these two stand-points that is, to introduce the Report as a Leader of the House and

then to speak on that Report for himself. I want a ruling on this point from the Chair.

Sri T. MARIAPPA (Mysore City North).—There is a little confusion on the part of both the parties. According to the Order Paper, it is the Chief Minister that has to place before the House the Report for consideration. After that is done, it may be open to any Hon'ble Member to offer his opinion Therefore there is confusion on the part of both the parties.

Mr. SPEAKER.—That is why I said there is nothing wrong on the part of the Hon'ble the Chief Minister to express his own views.

Sri J. MOHAMED IMAM (Jagalur).—The Hon'ble Chief Minister has already said that he is speaking as the Leader of the House.

ಶ್ರೀ ಕೆ. ಹನುಮಂತಯ್ಯ.—ಕಾಂಗ್ರೆಸ್ ಸದಸ್ಯನಾಗಿ ಭಾಷಾವಾರು ಪ್ರಾಂತಗಳ ವಿಂಗಡನಾ ತತ್ವಕ್ಕೆ ಒಪ್ಪಿದೆ. ಆ ತತ್ವವನ್ನು ಈಗ ಸುಮಾರು ಅರ್ಧ ಶತಮಾನದ ಹಿಂದಿನಿಂದಲೂ ಕಾಂಗ್ರೆಸ್ ಪ್ರತಿಪಾದಿಸುತ್ತಾ ಬಂದಿದೆ. ಆದರೆ ಸ್ವರಾಜ್ಯ ಸ್ಥಾಪನೆಯಾದಮೇಲೆ 1947ನೆಯ ಇಸವಿಯಿಂದ ಈಚೆಗೆ, ಯಾವ ತತ್ವವನ್ನು ನಾವು ಅಂಗೀಕರಿಸಿದ್ದೆವೋ ಆ ತತ್ವದ ವಿಷಯದಲ್ಲಿ ವಿವಾದ ಉಂಟಾಯಿತು. ಇಂಡಿಯಾ ಕಾನ್‌ಸ್ಟಿಟ್ಯೂಯೆಂಟ್ ಸಭೆಯಲ್ಲಿಯೂ ಇರತಕ್ಕ ಒಂದು ಅವಕಾಶ ನನಗೆ ಇತ್ತು. ಆಗಲೇ ಪ್ರಾಂತಗಳನ್ನು ಭಾಷೆಯ ಆಧಾರದಮೇಲೆ ವಿಂಗಡಿಸಬೇಕು ಎಂದು ಸಲಹೆ ಬಂದಿತ್ತು. ಆಗ ಇದು ಸಮಯವಲ್ಲ ಎಂದು ಹೇಳಿ ಆ ಪ್ರಶ್ನೆಯನ್ನು ಮುಂದಕ್ಕೆ ಹಾಕಿದೆವು. ಭಾಷಾವಾರು ಆಧಾರದ ಮೇಲೆ ಈ ರೀತಿ ಪ್ರಾಂತಗಳ ವಿಂಗಡಣೆ ಮಾಡತಕ್ಕದ್ದು ಸರಿಯೋ ತಪ್ಪೋ ಎನ್ನುವ ವಿಷಯದಲ್ಲಿ ವಿವಾದ ಎದ್ದಿತು. ಕೊನೆಗೆ ಕಾಂಗ್ರೆಸ್ ಸದಸ್ಯರಲ್ಲಿ ಮೊದಲಿನಿಂದಲೂ ಯಾವ ತತ್ವವನ್ನು ಅನುಸರಿಸಿಕೊಂಡು ಬಂದಿದ್ದೇವೋ ಆ ರೀತಿ ಭಾಷಾವಾರು ಪ್ರಾಂತಗಳ ರಚನೆ ಆಗಬೇಕೆಂದು ಕೆಲವರೂ, ಆ ರೀತಿ ಆಗಬಾರದೆಂದು ಕೆಲವರೂ, ಅಭಿಪ್ರಾಯಪಟ್ಟರು. ಆ ಸಂಸ್ಥೆಯಲ್ಲಿ ಚರ್ಚೆಯಾಗಿ ಕೊನೆಗೆ ಸ್ಟೇಟ್ಸ್ ರೀಆರ್ಗನೈಸೇಷನ್ ಕಮಿಷನ್ ಎಂಬ ಸಮಿತಿಯು ನೇಮಕವಾಯಿತು. ಹಲವು ವರ್ಷಗಳ ಕಾಲ ನಾನು ಭಾಷಾವಾರು ಪ್ರಾಂತದ ಪರವಾಗಿಯಾಗಲಿ ಅಥವಾ ವಿರೋಧವಾಗಿಯಾಗಲಿ ಮಾತನಾಡಲಿಲ್ಲ. ಸುಮಾರು ಆರು-ಏಳು ವರ್ಷಗಳಿಂದ ಈ ವಿಷಯದ ಗೋಡವೆಗೆ ಹೋಗದೆ ತಟಸ್ಥನಾಗಿದ್ದೆ. ಅನಂತರ ಮೊದಲು ಮಾತನಾಡಿದ್ದು ನಾನಾಲ್ ನಗರದ ಕಾಂಗ್ರೆಸ್ ಅಧಿವೇಶನದಲ್ಲಿ. 1953ನೆಯ ಇಸವಿ ಜನವರಿ ತಿಂಗಳಲ್ಲಿ ಅಲ್ಲಿ ಈ ಪ್ರಶ್ನೆ ಬಂದಾಗ ಇಂಡಿಯಾ ದೇಶದ ವಿಸ್ತೀರ್ಣ ಏನಿದೆ, ಅದನ್ನು ಹೆಚ್ಚುಕಡಿಮೆ ಸಮಭಾಗವಾಗಿ ವಿಂಗಡಿಸಿ, ಸಂಸ್ಥಾನಗಳು ಸ್ಥಾಪನೆಯಾಗಬೇಕು ಎನ್ನುವ ವಾದವನ್ನು ನಾನು ಆಗ ಇಟ್ಟೆ. ಇಂಗ್ಲೀಷಿನಲ್ಲಿ ಹೇಳುವುದಾದರೆ there must be rationalisation of territories between State and State in India ಎಂದು ಹೇಳಿದೆ. ಆರು ಕೋಟಿ ಮೂವತ್ತು ಲಕ್ಷ ಜನಸಂಖ್ಯೆ ಇರತಕ್ಕ ಉತ್ತರ ಪ್ರದೇಶವು ಒಂದು ಸಂಸ್ಥಾನ, ಎರಡು ಲಕ್ಷ ಮೂವತ್ತು ಸಾವಿರ ಜನಸಂಖ್ಯೆ ಇರತಕ್ಕ ಕೊಡಗೂ ಒಂದು ಸಂಸ್ಥಾನ. ಇದು ಸರಿಯಾದ ವ್ಯವಸ್ಥೆಯಲ್ಲ. ಕಾನ್‌ಸ್ಟಿಟ್ಯೂಷನ್ನಿನಲ್ಲಿ ವ್ಯಕ್ತಿ ಸ್ವಾತಂತ್ರ್ಯದ ಜೊತೆಗೆ ವ್ಯಕ್ತಿ ಸಮಾನತೆಯನ್ನೂ ಸ್ಥಾಪಿಸಿದ್ದೇವೆ. ವ್ಯಕ್ತಿಗಳ ಸಮಾನತೆ ಇರುವಾಗ ವ್ಯಕ್ತಿಗಳ ಗುಂಪಿಗೆ ಸಮಾನತೆ ಇಲ್ಲದೆ ಇರತಕ್ಕದ್ದು ಅನ್ಯಾಯ ಎಂದು ವಾದಿಸಿದೆ. ವ್ಯಕ್ತಿಗಳ ಗುಂಪು ನನ್ನ ಅರ್ಥದಲ್ಲಿ ಜನಗಳು ವಾಸಿಸತಕ್ಕ ಪ್ರಾಂತಗಳು. ಕಾನ್‌ಸ್ಟಿಟ್ಯೂಷನ್ನಿನಲ್ಲಿ 'ಎ' ಸ್ಟೇಟ್ಸ್, 'ಬಿ' ಸ್ಟೇಟ್ಸ್ ಮತ್ತು 'ಸಿ' ಸ್ಟೇಟ್ಸ್ ಎಂದು ವಿಭಾಗವಾಗಿ, ಅವುಗಳ ಅಂತಸ್ತು, ಹಕ್ಕುಭಾಧ್ಯತೆಗಳು ಬೇರೆ ಬೇರೆ ಆಗಿವೆ. 'ಎ' ಸ್ಟೇಟ್ ಎಂದು ಹೇಳಿದರೆ ಎಲ್ಲಕ್ಕೂ ದೊಡ್ಡ ಅಂತಸ್ತಿನಲ್ಲಿರತಕ್ಕದ್ದು, 'ಬಿ' ಸ್ಟೇಟ್ ಅದಕ್ಕಿಂತ ಕಡಿಮೆ ಅಂತಸ್ತಿನಲ್ಲಿರುವುದು, 'ಸಿ' ಸ್ಟೇಟ್ ಎಲ್ಲಕ್ಕಿಂತಲೂ ನಿಕೃಷ್ಟವಾದ ಅಂತಸ್ತಿನಲ್ಲಿದೆ, ಎನ್ನುವ ಭೇದಭಾವನೆ ಇದೆ. ಈ ರೀತಿಯ ಭೇದಭಾವನೆಯೆಲ್ಲಾ ಹೋಗಿ, ಸಂಸ್ಥಾನಗಳು ಪ್ರಮಾಣದಲ್ಲಿಯೂ, ಹಕ್ಕುಬಾಧ್ಯತೆ ಮತ್ತು ಅಂತಸ್ತಿನಲ್ಲಿಯೂ ಸಮಾನತೆಯನ್ನು ಪಡೆಯಬೇಕೆಂಬುದನ್ನು ಪ್ರತಿಪಾದಿಸಿದ್ದೇನೆ. ಇದಾದ ಎರಡು ಮೂರು ತಿಂಗಳಲ್ಲಿ ಇಂಡಿಯಾ ಸರ್ಕಾರದವರು ಸ್ಟೇಟ್ಸ್ ರೀಆರ್ಗನೈಸೇಷನ್ ಕಮಿಷನನ್ನು ಏರ್ಪಡಿಸಿದರು. ನಾನು ಭಾಷಣಮಾಡಿದ್ದರಿಂದ ಹಾಗೆ ಮಾಡಿದರೆಂದು ನಾನು ಹೇಳಲಾರೆ. ಆ ರೀತಿ ಈಗಲೂ ಹೇಳುವುದಿಲ್ಲ. ಆದರೆ ನಾನು ಏನು ಭಾವನೆಯನ್ನು ವ್ಯಕ್ತಪಡಿಸಿದ್ದೆನೋ ಹೆಚ್ಚುಕಡಮೆ ಈ ಪ್ರಾಂತ ಪುನರ್ವಿಂಗಡಣೆಯ ಸಮಿತಿಯ ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಆ ಅಭಿಪ್ರಾಯವೇ ಅಡಕವಾಗಿದೆ ಎಂದು ಹೇಳಬಯಸುತ್ತೇನೆ.

ಇಂಡಿಯಾ ದೇಶದ ವಿಸ್ತೀರ್ಣ ವಿಂಗಡಣೆ ಆಗುವಾಗ ಸಂಸ್ಥಾನಗಳು ಪ್ರಮಾಣ, ಹಕ್ಕುಬಾಧ್ಯತೆಗಳಲ್ಲಿ ಸಾಧ್ಯವಾದಷ್ಟು ಸಮಾನ ಅಂತಸ್ತನ್ನು ಪಡೆಯುತ್ತವೆಂದು ನಾನು ನಿರೀಕ್ಷಣೆ ಮಾಡಿದ್ದೆ. ಆದರೆ ಆ ನಿರೀಕ್ಷೆಯಲ್ಲಿ ಅರ್ಧ ತೃಪ್ತಿಯಾಗಿದೆ, ಅರ್ಧ ಆಗಿಲ್ಲ. ಸಂಸ್ಥಾನಗಳಲ್ಲಿದ್ದ ಈ ಬೇರೆ ಬೇರೆ ಅಂತಸ್ತು ಅಥವಾ ಭೇದವನ್ನು ಬೇಡವೆಂದು ಹೇಳಿ ಈ ಕಮಿಷನವರು ಶಿಫಾರಸುಮಾಡಿದ್ದಾರೆ. ಸ್ಥಾಪಿತವಾಗತಕ್ಕ ಎಲ್ಲ ಸಂಸ್ಥಾನಗಳೂ ಒಂದೇ ವರ್ಗದವರಾಗಬೇಕೆಂದು ಹೇಳಿದ್ದಾರೆ. ಇವು ಸ್ವಾಗತಾರ್ಹವಾದ ಸಲಹೆಗಳು. ಆಯಾ ಪ್ರಾಂತದ ಜನರು ಪುನರ್ವಿಂಗಡಣೆಯ ವಿಚಾರದಲ್ಲಿ ಏನೇನು ಅಭಿಪ್ರಾಯವನ್ನು ಹೊರಪಡಿಸಿದರೋ ಆ ಪ್ರಜಾಭಿಪ್ರಾಯಕ್ಕೆ ಮುಕ್ಕಾಲು ಪಾಲು ಈ ಕಮಿಷನವರು ಮನ್ನಣೆಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಈ ಕಮಿಷನ್ನಿನವರ ಶಿಫಾರಸು ಪೂರ್ತಿಯಿಲ್ಲದಿದ್ದರೂ ಮುಕ್ಕಾಲು ಭಾಗದಷ್ಟು ಸ್ವಾಗತಾರ್ಹವಾಗಿದೆ. ಈ ಕಮಿಷನವರು ಉತ್ತರ ಪ್ರದೇಶವನ್ನು ಆರೂವರೆ ಕೋಟಿ ಜನರಿರುವ ಹಾಗೆ ಮಾಡಿ, ವಿದರ್ಭವೆನ್ನತಕ್ಕ ಸಂಸ್ಥಾನವನ್ನು ಎಪ್ಪತ್ತೈದು ಲಕ್ಷ ಪ್ರಜೆಗಳಿಗಿಳಿಸಿರುವುದು, ನಾನು ಏನು ಸಮಾನತೆ ಎಂದು ಹೇಳಿದೆನೋ, ಅದಕ್ಕೆ ಅನುಗುಣವಾಗಿಲ್ಲ. ಒಂದು ಸಂಯುಕ್ತರಾಷ್ಟ್ರದಲ್ಲಿ, ಎಂದರೆ ಫೆಡರೇಷನ್ನಿನಲ್ಲಿ, ಪ್ರಾಂತಗಳ ವಿಂಗಡಣೆಯಾಗುವಾಗ, ಸಮನಾಗಿ ಆಗಿದ್ದರೆ, ಹಕ್ಕುಬಾಧ್ಯತೆಗಳು ಸಮನಾಗಿ ಸಾಧಿಸಲ್ಪಡುವ ಸೌಲಭ್ಯ ದೊರಕುತ್ತಿತ್ತು. ಈ ದಿವಸ ಇದು ದೊರಕದೇಯಿರುವ ಹಾಗಿದೆ ಎಂದು ಅನೇಕರು

(ಶ್ರೀ ಕೆ. ಹನುಮಂತಯ್ಯ)

ಸಂಶಯಪಡುತ್ತಾರೆ. ಆದರೆ, ಈ ಸಮಿತಿಯ ಶಿಫಾರಸ್ಸೇ ಕೊನೆಯಲ್ಲ; ಈ ಶಿಫಾರಸುಗಳು ಶಾಸನ ಸಭೆಗಳಲ್ಲಿ ಚರ್ಚೆಯಾಗಬೇಕು; ಪಾರ್ಲಿಮೆಂಟಿನಲ್ಲಿ ಚರ್ಚೆಯಾಗಬೇಕು; ಆ ಮೇಲೆ ಶಾಸನ ರೂಪ ತಾಳಬೇಕು. ಯಾವ ರೂಪ ತಾಳುತ್ತವೆ ಎಂಬುದನ್ನು ಈ ದಿವಸ ಹೇಳುವುದಕ್ಕೆ ಸಾಧ್ಯವಿಲ್ಲ.

ಪ್ರಾಂತಗಳ ವಿಂಗಡಣೆ ಕೊನೆಯದಾಗಿ ಆಗುವಾಗ ಪ್ರಮಾಣದಲ್ಲಿ ಸಾಧ್ಯವಾದಷ್ಟು ಸಮಾನತೆಯನ್ನು ಪಡೆದರೆ ಒಳ್ಳೆಯದು. ಉತ್ತರೋತ್ತರ ಇದರಿಂದ ಪ್ರಾಂತ ಸರ್ಕಾರಗಳಿಗೂ ಕೇಂದ್ರ ಸರ್ಕಾರಕ್ಕೂ ಸೌಹಾರ್ದಯುತವಾದ ಸಂಬಂಧ ಏರ್ಪಟ್ಟು ಎಲ್ಲ ಪ್ರಾಂತಗಳಿಂದಲೂ ಇಂಡಿಯಾ ದೇಶದ ಒಗ್ಗಟ್ಟಿಗೆ, ಸತತವಾದ ಸಹಾಯ ಸಿಕ್ಕುತ್ತದೆಂದು ನನ್ನ ಭಾವನೆ. ಎಷ್ಟು ಪ್ರಮಾಣದಲ್ಲಾದರೆ ಸರಿಯಾಗುತ್ತದೆ ಎಂದು ಕೇಳಬಹುದು. ಈ ವಿಷಯವನ್ನೂ ಕೂಡ ಈ ಸಭೆಯಲ್ಲಿ ಎರಡು ವರ್ಷಗಳ ಹಿಂದೆಯೇ ನಾನು ಹೇಳಿದ್ದೇನೆ. ಇದು ಈ ಸಭೆಯ ನಡವಳಿಕೆಗಳ ವರದಿಯಲ್ಲಿವೆ. ಆ ಮಾತನ್ನು ಕೇಳಿದ ಎಲ್ಲ ಸದಸ್ಯರೂ ಇಲ್ಲಿದ್ದಾರೆ. ಎರಡು ಕೋಟಿ ಪ್ರಜೆಗಳು ಒಂದು ಪ್ರಾಂತ್ಯದಲ್ಲಿದ್ದರೆ ಅದು ಬಹಳ ಚಿಕ್ಕದೂ ಆಗದೆ ಬಹಳ ದೊಡ್ಡದೂ ಆಗದೆ, ಸಮತೂಕ ಸಂಸ್ಥಾನವಾಗುತ್ತದೆಂಬ ಅಭಿಪ್ರಾಯವನ್ನು ಎರಡು ವರ್ಷಗಳ ಹಿಂದೆ ಈ ಸಭೆಯಲ್ಲಿ ವ್ಯಕ್ತಪಡಿಸಿದ್ದೇನೆ.

ನಾವು ಇಂಡಿಯಾ ಸರ್ಕಾರಕ್ಕೆ ಈ ಶಾಸನ ಸಭೆಯ ಅಭಿಪ್ರಾಯವನ್ನು ತಿಳಿಸಬೇಕು. ಅಭಿಪ್ರಾಯವನ್ನು ಯಾವ ರೀತಿ ತಿಳಿಸಬೇಕೆಂದು ಮಾನ್ಯ ಪ್ರತಿಪಕ್ಷದ ನಾಯಕರು ಕೇಳಿದರು. ಅದಕ್ಕೆ ಎರಡು ಮಾರ್ಗಗಳಿವೆ. ವೈಯಕ್ತಿಕವಾಗಿ ತಮ್ಮ ತಮ್ಮ ಅಭಿಪ್ರಾಯವನ್ನು ಮಾನ್ಯ ಸದಸ್ಯರುಗಳು ಹೇಳಿದರೆ, ಅಭಿಪ್ರಾಯ ಈ ರೀತಿ ಇದೆಯೆಂದು ಹೇಳಿ ತಿಳಿಸುವುದಕ್ಕೆ ಸಾಧ್ಯವಾಗುತ್ತದೆ; ಅಥವಾ ನಾವೆಲ್ಲರೂ ಸಮಾಲೋಚಿಸಿ, ಒಂದು ನಿರ್ಣಯ ಮಾಡಿ, ಅದನ್ನು ಸಭೆಯ ಮುಂದಿಟ್ಟು, ಅಂಗೀಕಾರ ಮಾಡಿಸಿ ಕಳುಹಿಸಿದರೆ ಅದೂ ಕೂಡ ಪ್ರಜಾಪ್ರಭುತ್ವ ತತ್ವಕ್ಕನುಗುಣವಾಗಿರುತ್ತದೆ. ಈ ದಿವಸ ನಾನು ಈ ಎರಡನೆಯ ಮಾರ್ಗ ಸಾಧ್ಯವೆ ಎಂಬುದನ್ನು ಸಮಾಲೋಚನೆ ಮಾಡುತ್ತಿದ್ದೇನೆ. ಈ ಪ್ರಶ್ನೆ ಉತ್ತರೋತ್ತರ ಒಗ್ಗಟ್ಟಿನಿಂದಲೇ ಒಮ್ಮತದಿಂದಲೇ ಬಗೆಹರಿಯಬೇಕು. ಆದುದರಿಂದ ಪ್ರತಿಪಕ್ಷದ ನಾಯಕರೂ, ನಾನೂ, ಈ ಸಭೆಯ ಇನ್ನೂ ಅನೇಕ ಮಾನ್ಯ ಸದಸ್ಯರೂ ಸೇರಿ, ಸಮಾಲೋಚನೆ ಮಾಡಿ ಈ ಕಮಿಷನ್ನಿನ ಸಲಹೆಗಳ ವಿಚಾರದಲ್ಲಿ ಒಂದು ನಿರ್ಣಯವನ್ನು ರೂಪಿಸುವುದಕ್ಕೆ, ರಚಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡೋಣ. ಇನ್ನೂ ನಾಲ್ಕೈದು ದಿವಸಗಳ ಕಾಲಾವಕಾಶವಿದೆ. ನಾಳೆಯಾದರೂ ಕುಳಿತುಕೊಳ್ಳಬಹುದು. ಅಥವಾ ಈ ಚರ್ಚೆ ಆಗುತ್ತಿರುವಾಗಲಾದರೂ ಈ ರೀತಿ ಕುಳಿತ ಕೊಂಡು ಎಲ್ಲರಿಗೂ ಸಮ್ಮತವಾಗಿರುವ ಒಂದು ನಿರ್ಣಯವನ್ನು ರೂಪಿಸಬಹುದು. ಈ ಮಾರ್ಗವನ್ನನುಸರಿಸೋಣ. ದೇವರು ಈ ಮಾರ್ಗದಲ್ಲಿ ನಾವೆಲ್ಲರೂ ಜಯಶಾಲಿಗಳಾಗುವಂತೆ ಮಾಡಲೆಂದು ಪ್ರಾರ್ಥಿಸೋಣ.

ಇನ್ನು ಪ್ರಾಂತ ಪುನರ್ವಿಂಗಡಣೆ ಸಮಿತಿಯ ವರದಿಯಲ್ಲಿ ನಮಗೆ ಅನ್ವಯಿಸುವ ಸಲಹೆಗಳ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಹೇಳಬೇಕೆಂದಿದ್ದೇನೆ. ಮೊದಲನೆಯದಾಗಿ, ಬಳ್ಳಾರಿಯ ಪ್ರಶ್ನೆಯನ್ನು ತೆಗೆದುಕೊಳ್ಳೋಣ. ಬಳ್ಳಾರಿಯ ಮೂರು ತಾಲ್ಲೂಕುಗಳು, ಒಂದು ಸಬ್-ತಾಲ್ಲೂಕು—ಆಂಧ್ರ ಸಂಸ್ಥಾನಕ್ಕೆ ಸೇರಬೇಕೆಂಬ ಸಲಹೆಯನ್ನು ಕಮಿಷನ್ನಿನವರು ಮಾಡಿದ್ದಾರೆ. ಮಿಕ್ಕ ವಿಚಾರಗಳಲ್ಲಿ ಯಾವ ಭಿನ್ನಾಭಿಪ್ರಾಯವೇ ಇರಲಿ, ಈ ಸಲಹೆ ಈ ಸಂಸ್ಥಾನದ ಜನರಿಗೆ ಸಮ್ಮತವಾದ ಸಲಹೆಯಲ್ಲ. ನನ್ನದು ಮೊದಲಿನಿಂದಲೂ ಇದೇ ಖಚಿತವಾದ ಅಭಿಪ್ರಾಯ — ಎರಡು ಶಾಸನ ಸಭೆಗಳು ಮತ್ತು ಪಾರ್ಲಿಮೆಂಟು ತೀರ್ಮಾನ ಮಾಡಿದ ವಿಷಯವನ್ನು ಪುನಃ ತೆಗೆದುಕೊಂಡು ಪರ್ಯಾಲೋಚನೆಮಾಡಿ ಬೇರೆ ಶಿಫಾರಸು ಮಾಡುತ್ತೇವೆ ಎಂದು ಹೇಳುವ ಹಕ್ಕು ಯಾವ ಸಮಿತಿಗೂ ಇಲ್ಲ. ಆಂಧ್ರ ಅಸೆಂಬ್ಲಿಯವರು . . .

Sri Mulka GOVINDA REDDY (Chitaldrug).—There was no Andhra Assembly then.

ಶ್ರೀ ಕೆ. ಹನುಮಂತಯ್ಯ.—ಮದರಾಸು ಅಸೆಂಬ್ಲಿ ಮತ್ತು ಮೈಸೂರು ಶಾಸನಸಭೆ ಇವೆರಡೂ ಆಂಧ್ರ ರಾಜ್ಯ ಮಸೂದೆಯನ್ನು ಚರ್ಚೆಮಾಡಿ ತಮ್ಮ ಅಭಿಪ್ರಾಯವನ್ನು ತಿಳಿಸಿದವು. ಇದಾದಮೇಲೆ ಅದು ಪಾರ್ಲಿಮೆಂಟಿಗೆ ಹೋಗಿ, ಆ ಸಭೆಯಿಂದ ಅದು ಅಂಗೀಕೃತವಾಯಿತು. ಆ ಮಸೂದೆ ಚರ್ಚೆಗೆ ಬಂದಾಗ ವಿವಾದದಲ್ಲಿದ್ದುದು ಒಂದು ಟೌನ್ ವಿಷಯ, ಒಂದು ಫಿರ್ಕಾ ವಿಷಯ ಮಾತ್ರ. ಜಸ್ಟಿಸ್ ಮಿಶ್ರಾರವರು ತೀರ್ಮಾನಮಾಡಿದ ಮೇಲೆ ಈ ಮೂರು ಸಭೆಗಳಿಂದಲೂ ಅದೇ ತೀರ್ಮಾನ ಒಪ್ಪಲ್ಪಟ್ಟಿತು. ಅದಾಗಿ ಬಹಳ ದಿವಸವಾಗಿಲ್ಲ. ಅದಾದಮೇಲೆ ಆಂಧ್ರ ಸರ್ಕಾರವಾಗಲಿ, ಯಾರೇ ಆಗಲಿ, ಹೊಸಪೇಟೆ, ಬಳ್ಳಾರಿ, ಸಿರಿಗುಪ್ಪ, ಮಲ್ಲಾಪುರ ಸಬ್-ತಾಲ್ಲೂಕು—ಈ ನಾಲ್ಕೂ ಬೇಕೆಂದು ಕೇಳಿದವರೇ ಇರಲಿಲ್ಲ. This looks almost an after-thought. ಈ ನಾಲ್ಕು ತಾಲ್ಲೂಕುಗಳು ಆಂಧ್ರಕ್ಕೆ ಸೇರಬೇಕೆಂಬ ಪ್ರಶ್ನೆಯೇ ಆಂಧ್ರ ಸರ್ಕಾರಕ್ಕಾಗಲಿ ಅಥವಾ ಮುಖಂಡರಿಗಾಗಲಿ, ಹೊಳೆದೇ ಇರಲಿಲ್ಲ. ಆದರೆ ಯಾರನ್ನೂ ಹೇಳದೆ ಕೇಳದೆ ಈ ಪ್ರಶ್ನೆಯನ್ನು ಈ ಕಮಿಷನ್ನಿನವರು ತೆಗೆದುಕೊಂಡು ಒಂದು ಸಲಹೆಯನ್ನು ಮಾಡಿದ್ದಾರೆ. ಆಂಧ್ರ ಸರ್ಕಾರದವರು ಒಂದು ಮನವಿಯನ್ನು ಈ ಕಮಿಷನ್ನಿನವರ ಮುಂದೆ ಇಟ್ಟಹಾಗೆ, ಅದನ್ನು ಕಮಿಷನ್ನಿನವರು ಒಪ್ಪಿಕೊಂಡಹಾಗೆ ಈ ವರದಿಯಲ್ಲಿದೆ. ಇವರು ತೋರಿಸುವ ಕಾರಣ, ತುಂಗಭದ್ರ ಜಲಾಶಯದ ಕೆಲಸಕಾರ್ಯಗಳು ಮೈಸೂರು ಸರ್ಕಾರ ಮತ್ತು ಆಂಧ್ರ ಸರ್ಕಾರ ಈ ಎರಡು ಸರ್ಕಾರಗಳಿಗೂ ಸೇರಿದ್ದರೆ ಸುಗಮವಾಗಿ ನಡೆಯುವುದಿಲ್ಲ ಎಂಬುದು. ಇದು ಈ ವರದಿಯಿಂದ ಗೊತ್ತಾಗುತ್ತದೆ. ಇಂತಹ ಇಂಟರ್‌ಸ್ಟೇಟ್ಸ್ ಜಲಾಶಯಗಳು ಅನೇಕ ಇವೆ. ಈ ತತ್ವವನ್ನು ಎಲ್ಲಕ್ಕೂ ಅನ್ವಯಿಸದೆ ತುಂಗಭದ್ರಾಕ್ಕೆ ಮಾತ್ರ ಅನ್ವಯಿಸುವುದು ಸರಿಯಾದ ವಾದವಲ್ಲ.

ಎರಡನೆಯದಾಗಿ, ಆಂಧ್ರ ಸರ್ಕಾರದವರು ಹಾಗೆ ಕೇಳಿದ್ದರೆ, ಅದಕ್ಕೆ ಸಂಬಂಧಪಟ್ಟವರು ಪ್ರತ್ಯುತ್ತರವಾಗಿ ಏನು ಹೇಳುತ್ತಾರೆಂದು ಕೇಳುವುದು ಸತ್ಸಂಪ್ರದಾಯ. ಈ ಸತ್ಸಂಪ್ರದಾಯವನ್ನು ಈ ಕಮಿಷನ್ನಿನವರು ಪಾಲಿಸಲಿಲ್ಲ. ನಮ್ಮನ್ನು ಕೇಳಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಆಂಧ್ರದ ಮನಸ್ಸಿಗೂ ಹೊಳೆಯದೇ ಇದ್ದ ವಿಷಯವನ್ನು ತೆಗೆದುಕೊಂಡು ಈ ರೀತಿ ಶಿಫಾರಸು ಮಾಡುತ್ತಾ

ರೆಂದು ಕನಸಿನಲ್ಲಿಯೂ ಯಾರೂ ಕಾಣಲಾಗಲಿಲ್ಲ. ಆಂಧ್ರ ಸರ್ಕಾರದ ಮುಖಂಡರಾಗಲಿ, ಯಾರೇ ಆಗಲಿ, ತುಂಗಭದ್ರ ಜಲಾಶಯದ ಕೆಲಸಕಾರ್ಯ ಸರಿಯಾಗಿ ನಡೆಯುತ್ತಿಲ್ಲವೆಂದು ಆರೋಪಣೆ ಮಾಡಿದ್ದರೆ, ಅದು ಸರಿಯಲ್ಲವೆಂದು ಸವಿನಯವಾಗಿ ನಾವು ಅರಿಕೆ ಮಾಡಿಕೊಳ್ಳುತ್ತಿದ್ದೆವು. ಈಗಲೂ ನಾವು ಆ ವಿಷಯದಲ್ಲಿ ಯಾವ ತೊಡಕನ್ನೂ ಉಂಟುಮಾಡುತ್ತಿಲ್ಲ. ಇದು ನಮಗೂ ಅವರಿಗೂ ಇಬ್ಬರಿಗೂ ಪ್ರಯೋಜನವಾಗುವ ಯೋಜನೆ. ತುಂಗಭದ್ರಾ ಬೋರ್ಡನ್ನು ಮಾಡಬೇಕು ಎನ್ನುವುದು ಚರ್ಚೆಗೆ ಬಂತು. ಒಂದು, ಒಂದೂವರೆ ವರ್ಷದ ಹಿಂದೆ. ಆಗ ಆಂಧ್ರದ ಮುಖ್ಯಮಂತ್ರಿಗಳಾಗಿದ್ದ ಶ್ರೀ ಟಿ. ಪ್ರಕಾಶಂ ಅವರೂ ಮತ್ತು ಉಪ ಮುಖ್ಯಮಂತ್ರಿಯಾಗಿದ್ದ ಶ್ರೀ ಎನ್. ಸಂಜೀವರೆಡ್ಡಿಯವರೂ ಆಂಧ್ರ ಸರ್ಕಾರದ ಪರವಾಗಿ ಬಂದರು. ನಾನೂ ಮತ್ತು ಪಬ್ಲಿಕ್‌ವರ್ಕ್ಸ್ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರೂ ನಮ್ಮ ಸರ್ಕಾರದ ಪರವಾಗಿದ್ದೆವು. ಅದ್ಭುತವಾದದ್ದೆಂದು ಹೇಳಿ ಪ್ರಚಾರವಾಗುತ್ತಿದ್ದ ವಿಷಯ ಅದು. ಈಗ ನಿಮಗೆ ಆಶ್ಚರ್ಯವಾಗಬಹುದು, ಕೇವಲ ಹದಿನೈದು ನಿಮಿಷಗಳಲ್ಲಿ ನಾವುಗಳು ಸಾಮರಸ್ಯದಿಂದ ಒಪ್ಪಂದಕ್ಕೆ ಬಂದೆವು. ಶ್ರೀ ನಂದಾ ಅವರು ಒಪ್ಪಂದವನ್ನು ಬರೆದುಕೊಂಡು ಸರ್ಕಾರಿ ಆಜ್ಞೆಯನ್ನು ಹೊರಡಿಸಿದರು. ಪ್ರಾರಂಭದಲ್ಲಿ ಎಷ್ಟು ಸುಗಮವಾಗಿ ಆಯಿತೆಂಬುದನ್ನು ಹೇಳಲು ಇದನ್ನು ಹೇಳಿದೆ. ಬೋರ್ಡ್ ಸ್ಥಾಪನೆಯಾದಮೇಲೆ ಉಭಯ ಸರ್ಕಾರದವರೂ ಒಪ್ಪಿದ ಚೇರ್ಮನ್‌ರವರ ನೇಮಕವಾಯಿತು. ಅವರು ಕನ್ನಡಿಗರೂ ಅಲ್ಲ, ಆಂಧ್ರರೂ ಅಲ್ಲ. ಶ್ರೀ ಬಿ. ಕೆ. ಗೋಖಲೆಯವರನ್ನು ನೇಮಿಸಿದರು.

ಅವರಾದರೂ ಏನು ಹೇಳುತ್ತಾರೆ ನೋಡಿ :

"Sri B. K. Gokhale, Chairman of the Tungabhadra Project Board at a Press Conference at the dam site on Saturday, *i.e.*, on 7th November discounted fears about the smooth working of the Board."

Sri Mulka GOVINDA REDDY.—May I know whether he is reading from a printed book or a paper cutting?

Sri K. HANUMANTHAIYA.—I am quoting from my notes, Sir.

Sri J. MOHAMED IMAM.—Nothing prevents him from taking cuttings from the newspapers.

Sri K. HANUMANTHAIYA.—My Hon'ble friend has read from newspaper itself several times.

Sir, he discounted fears about the smooth working of the Board expressed in the Report of the States Reorganisation Commission. The Board was reconstituted eight months ago, and since then it has been working very smoothly. He added that all the decisions of the Board had been unanimous and there had been no occasion to take any decision by a majority vote. He stated: the Commission did not ask them to furnish any information regarding the Project or the Board.

ನಾನು ಮೈಸೂರಿನಲ್ಲಿ ನಡೆದ ಶಾಸನ ಸಭೆಯಲ್ಲಿಯೂ ಹೇಳಿದ್ದೇನೆ. ನಮ್ಮನ್ನೂ ಕೇಳದೆ, ಬೋರ್ಡನ್ನೂ ಹೇಗೆ ಕೆಲಸ ಮಾಡುತ್ತಿದ್ದೀರೆಂದು ಕೇಳದೆ, ಈ ರೀತಿಯಾಗಿ ಏಕಪಕ್ಷವಾಗಿ ಗುಟ್ಟಾಗಿ ತೀರ್ಮಾನವನ್ನು ಎಸ್. ಆರ್. ಸಿ. ಯವರು ಕೊಟ್ಟಿರುವುದು ಬಹಳ ಅನ್ಯಾಯ. ಒಂದು ದೃಷ್ಟಿಯಿಂದ ನೋಡಿದರೆ ಈ ಶಾಸನ ಸಭೆಯಿಂದ ನಾನು ಆರೋಪಣೆ ಮಾಡಬಾರದು. ಆದರೂ ಇದನ್ನು ದೇಶದ ಹಿತದೃಷ್ಟಿಯಿಂದ, ಈ ನಾಲ್ಕು ತಾಲ್ಲೂಕುಗಳಲ್ಲಿರುವ ನಾಲ್ಕು ಲಕ್ಷ ಜನರ ಹಿತದೃಷ್ಟಿಯಿಂದ ಹೇಳಬೇಕಾಗಿದೆ. ಇವರು ಮಾಡಬಹುದಾದ ಶಿಫಾರಸ್ಸು ನನಗೆ ಗೊತ್ತಿರಲಿಲ್ಲ. ಇಲ್ಲಿ ಯಾರಿಗೂ ಗೊತ್ತಿರಲಿಲ್ಲ. ಅಂಥಾದ್ದು ವರದಿ ಪ್ರಕಟಣೆಯಾಗುವ ಬಹಳ ದಿವಸಗಳ ಹಿಂದೆಯೇ ಆಂಧ್ರದ ಮುಖ್ಯ ಮಂತ್ರಿಯವರಿಗೆ ಈ ನಾಲ್ಕು ತಾಲ್ಲೂಕುಗಳೂ ವರ್ಗಾವಣೆಯಾಗುವುದು ಗೊತ್ತಾಗಿತ್ತು. ಎಂದರೆ—ಅದರ ಮೇಲೆ ನಾವು ಗೋಪ್ಯವಾಗಿ ಏನು ನಡೆಯಿತು ಎಂದು ಊಹೆ ಮಾಡಬಹುದು? ಅದೂ ಸ್ಟೇಟ್ಸ್ ರೀಆರ್ಗನೈಸೇಷನ್ ಸಮಿತಿಯವರ ವರದಿಯು ಪ್ರಕಟವಾಗುವುದಕ್ಕೆ ಸುಮಾರು ಎರಡು ತಿಂಗಳ ಹಿಂದೆಯೇ ಗೊತ್ತಾಗಿದೆ? ಇದು ಕಮಿಷನ್ನಿನ ಸದಸ್ಯರ ಮಾನವನ್ನು ಕಾಪಾಡತಕ್ಕ ಸಂಗತಿಯೇ ಎನ್ನುವುದನ್ನು ಕೂಡ ಯೋಚನೆಮಾಡಬೇಕಾಗಿದೆ. ಆದರೆ, ಆರೋಪಣೆಗಳನ್ನು ಮಾಡಿ ಯಾರ ಹಕ್ಕು ಬಾಧ್ಯತೆಗಳನ್ನೂ ಕೂಡ ನಾವು ಕಸಿದುಕೊಳ್ಳಬೇಕಾಗಿಲ್ಲ. ಈ ದಿವಸ ನಾವು ಮೈಸೂರು ಶಾಸನಸಭೆಯವರು ತೆಗೆದುಕೊಳ್ಳಬೇಕಾದ ಒಂದು ನಿಲುವೇನೆಂದರೆ, ನೀತಿಯ ನಿಲುವು. ಕೊಟ್ಟ ಭಾಷೆಗೆ ತಪ್ಪಬಾರದು ಎಂಬ ಸತ್ಸಂಪ್ರದಾಯವನ್ನು ಎಲ್ಲ ದೇಶಗಳಿಗಿಂತಲೂ ಮಿಗಿಲಾಗಿ ಕಾಪಾಡಿಕೊಂಡು ಬರುತ್ತಿರುವುದೇ ನಮ್ಮ ದೇಶ. ಹೀಗಿರುವಲ್ಲಿ, ಇಂಡಿಯಾ ದೇಶದ ಪ್ರಧಾನ ಮಂತ್ರಿಯವರು, ಇಂಡಿಯಾ ದೇಶದ ಗೃಹಮಂತ್ರಿಯವರು ಪಾರ್ಲಿಮೆಂಟ್ ಸಭೆಯಲ್ಲಿ ಈ ವಿಚಾರದಲ್ಲಿ ಸ್ಪಷ್ಟವಾದ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಬಳ್ಳಾರಿಯ ಪ್ರಶ್ನೆಯು ಪೂರ್ಣ ಪರಿಶೀಲನೆಯಾಗಿ ಒಂದು ತೀರ್ಮಾನಕ್ಕೆ ಬಂದಿದೆ; ಅದರಂತೆ ತೀರ್ಮಾನ ಕೊಟ್ಟಿದ್ದೇವೆ; ಅದನ್ನು ಪುನಃ ಬದಲಾಯಿಸುವುದಕ್ಕೆ ಆಗುವುದಿಲ್ಲವೆಂದು ಹೇಳಿ ಮೂವತ್ತಾರು ಕೋಟಿ ಪ್ರಜೆಗಳನ್ನು ಪ್ರತಿನಿಧಿಸತಕ್ಕ ಪಾರ್ಲಿಮೆಂಟ್ ಸಭೆಯಲ್ಲಿ ಮೂವತ್ತಾರು ಕೋಟಿ ಜನರ ನಾಯಕರಾದ ಪಂಡಿತ್ ಜವಹರಲಾಲ್ ನೆಹ್ರೂರವರೂ ಮತ್ತು ಅವರ ಮಂತ್ರಿವರ್ಗದವರೂ ಹೇಳಿದ್ದಾರೆ. ಅಲ್ಲದೆ, ನೆಹ್ರೂರವರು ಒಂದು ಕಾಗದವನ್ನು ಕೂಡ ಕರ್ನಾಟಕ ಆಕ್ಷನ್ ಕಮಿಟಿಯ ಅಧ್ಯಕ್ಷರಾದ ಶ್ರೀಮಾನ್ ಗಾಡಿ ಲಿಂಗಪ್ಪನವರಿಗೆ ಬರೆಯುತ್ತಾ ಹೀಗೆ ಹೇಳಿದ್ದಾರೆ:

[*To Sri Gadi Lingappa, Karnataka Action Committee, Bellary.*]

"In reply to your telegram dated 5th August 1953 to the Prime Minister, I am to say that there is no question of Government going back or changing the decision already reached in regard to Bellary Taluk. Government came to this decision after full consideration

(SRI K. HANUMANTHAIYA.)

and will abide by it. In any case, Government do not change their decision because of fasts and other similar activities."

ಎಂದಮೇಲೆ, ಇನ್ನು ಮಿಕ್ಕ ಮಾತುಗಳನ್ನು ಪಾರ್ಲಿಮೆಂಟಿನ ಪ್ರೊಸೀಡಿಂಗ್ಸ್‌ನಿಂದಾಗಲಿ ಅಥವಾ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯಗಳಿಂದಾಗಲಿ ಹೇಳುವುದು ಅನಾವಶ್ಯಕ. ಒಟ್ಟಿನಲ್ಲಿ ಇಂಡಿಯಾ ದೇಶದ ಪ್ರಧಾನ ಮಂತ್ರಿಯಾದಂಥ ದೊಡ್ಡ ವ್ಯಕ್ತಿ ಕೊಟ್ಟಿರತಕ್ಕ ಅಭಯವಚನ ಊರ್ಜಿತವಾಗಬೇಕು. ಮಹಾತ್ಮಾ ಗಾಂಧಿಯವರು ಈ ದಿವಸ ಇದ್ದಿದ್ದರೆ, ಇನ್ನಾವ ಪ್ರಶ್ನೆಯನ್ನೂ ಮನಸ್ಸಿಗೆ ತೆಗೆದುಕೊಳ್ಳದೆ ಒಂದು ಸಲ ಭಾಷೆಕೊಟ್ಟರೆ ಅದರಂತೆ ನಡೆಯಬೇಕೆಂದು ಹೇಳಿಬಿಡುತ್ತಿದ್ದರು. ಸತ್ಯಕ್ಕಾಗಿ ಪ್ರಾಣವನ್ನಾದರೂ ಕೊಡತಕ್ಕ ಕಾಂಗ್ರೆಸ್ ಸಂಸ್ಥೆ ಮತ್ತು ನಾಯಕವರ್ಗ ಆ ಮಾತನ್ನು ಪರಿಪಾಲಿಸಬೇಕೆಂದು ಹೇಳುತ್ತಿದ್ದರು. ತಮಗೇ ಗೊತ್ತಿದೆ. ರಾಜಕೋಟೆಯಲ್ಲಿ ರಾಜರಿಗೂ ಪ್ರಜೆಗಳಿಗೂ ವಿವಾದವುಂಟಾದಾಗ ಮಹಾತ್ಮಾ ಗಾಂಧಿಯವರು ಏನುಮಾಡಿದರು ಎಂಬುದು. ಸತ್ಯಕ್ಕಾಗಿ, ಸರಿಯಾದ ಮಾರ್ಗದರ್ಶನಕ್ಕಾಗಿ ಜವಾಬ್ದಾರಿ ಸರ್ಕಾರ ಬರುತ್ತಿದ್ದುದನ್ನೇ ಬಿಟ್ಟರು. ರಾಜರ ಕಡೆ ತೀರ್ಮಾನವಾದರೂ ಚಿಂತೆಯಿಲ್ಲ, ಸತ್ಯವಾದ ಮಾರ್ಗದಲ್ಲಿ ನಡೆಯಬೇಕೆಂಬ ಉದಾತ್ತಧ್ಯೇಯವನ್ನು ಸಾರಿದರು. ಆ ಮಹಾತ್ಮರ ಉತ್ತರಾಧಿಕಾರಿಯಾದಂಥ ಜವಹರಲಾಲ್ ನೆಹರೂರವರು ಎಂದಿಗೂ ತಾವು ಕೊಟ್ಟ ಭಾಷೆಗೆ ತಪ್ಪುತ್ತಾರೆಂದು ನಾನಾದರೂ ತಿಳಿದುಕೊಂಡಿಲ್ಲ; ಯಾರೂ ತಿಳಿದುಕೊಂಡಿಲ್ಲ. This is an argument based on moral consideration.

There is the second consideration which involves democratic principles. ಬಳ್ಳಾರಿ, ಹೊಸಪೇಟೆ, ಸಿರಗುಪ್ಪ ಮತ್ತು ಮಲ್ಲಾಪುರ ತಾಲ್ಲೂಕುಗಳ ಜನಗಳ ಅಭಿಪ್ರಾಯವನ್ನು ಕೂಡ ನಾನು ತಿಳಿದುಕೊಂಡಿದ್ದೇನೆ. ಹೋದ ವಾರ ಆ ತಾಲ್ಲೂಕುಗಳಲ್ಲಿ ಸಂಚಾರಮಾಡಿ ನೋಡಿದ್ದೇನೆ. ಅಲ್ಲಿ ಸುಮಾರು ನಾಲ್ಕುಲಕ್ಷ ಜನರಿದ್ದಾರೆ. ಆ ಪ್ರಾಂತದಲ್ಲಿನ ಅಷ್ಟು ಜನರಲ್ಲಿ—ಉತ್ಪ್ರೇಕ್ಷೆಯೇನೂ ಹೇಳುತ್ತಿಲ್ಲ—ಮೂರುಲಕ್ಷದ ತೊಂಭತ್ತು ಸಾವಿರ ಜನರಾದರೂ ಈಗಿರತಕ್ಕ ಹಾಗೆ ಮೈಸೂರು ಸಂಸ್ಥಾನದಲ್ಲಿಯೇ ಇರಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದಾರೆ, ಪ್ರಜಾಪ್ರಭುತ್ವದ ಈ ಯುಗದಲ್ಲಿ, ಪ್ರಜಾಪ್ರಭುತ್ವಕ್ಕೆ ನಾವು ಶರಣುಹೋಗಿ ಪ್ರಮಾಣವಚನವನ್ನು ಸ್ವೀಕರಿಸಿರುವ ಈ ಕಾಲದಲ್ಲಿ, ಆ ನಾಲ್ಕುಲಕ್ಷ ಪ್ರಜೆಗಳ ಅಭಿಪ್ರಾಯವನ್ನು ನಾವು ತೃಣೀಕರಿಸುವುದಕ್ಕೆ ಸಾಧ್ಯವಿಲ್ಲ. ಪ್ರಜೆಗಳ ಅಭಿಪ್ರಾಯ ಯಾವ ರೀತಿಯಿದೆಯೋ ಆ ರೀತಿ ನಾವು ನಡೆದುಕೊಳ್ಳಬೇಕು. ಈ ವಾದವನ್ನು ನಾನು ಒಂದು ತಿಂಗಳ ಹಿಂದೆಯೇ ಮಾಡಿದೆ. ಸಂಸ್ಥಾನಗಳ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿಯೂ ಕೂಡ ಹೇಳಿದ್ದೇನೆ. ಅಲ್ಲದೆ, ನನ್ನ ನೀತಿಯಾದರೂ ಕೂಡ ಈ ತಾಲ್ಲೂಕು ನಮಗೆ ಬೇಕು, ಆ ಡಿಸ್ಟ್ರಿಕ್ಟು ನಮಗೆ ಬೇಕು ಎಂದು ಕೇಳತಕ್ಕದ್ದಲ್ಲ. ನನ್ನ ಪ್ರಕೃತಿಯೂ ಅದಲ್ಲ. ನಮ್ಮ ನಿರ್ಧರವಾದ ನೀತಿ ಇದು—ಮೈಸೂರು ದೇಶಕ್ಕೆ ಅಕ್ಕಪಕ್ಕದವರು ಬರಬೇಕೆಂದು ಇಚ್ಛೆಪಟ್ಟರೆ ಅವರಿಗೆ ನಮ್ಮ ಹೃತ್ಪೂರ್ವಕವಾದ ಸ್ವಾಗತವನ್ನು ನೀಡುವುದು. ಇದು ನಾನು ಹಾಕಿದ ನೀತಿಯಲ್ಲ. 1949ನೆಯ ಇಸವಿಯಲ್ಲಿ ಮೈಸೂರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯೆಂಬುದಿತ್ತು; ಆ ಸಭೆಯಲ್ಲಿದ್ದ ಅನೇಕ ಮಾನ್ಯಸದಸ್ಯರುಗಳು ಈ ಸಭೆಯಲ್ಲಿ ಇದ್ದಾರೆ. ಅವರು ಈ ವಿಷಯಗಳನ್ನೆಲ್ಲಾ ಆಲೋಚನೆಮಾಡಿದ್ದಾರೆ. ಶ್ರೀಮಾನ್ ಚೆಂಗಲರಾಯರೆಡ್ಡಿಯವರು ಆ ಸಭೆಯ ನಾಯಕರಾಗಿದ್ದು, ನಾನು ಅದರ ಉಪನಾಯಕನಾಗಿದ್ದು, ಈ ಸಭೆಯಲ್ಲಿ ಇರುವ ಅನೇಕ ಮಹನೀಯರ ಜೊತೆಗೂಡಿ ಯೋಚನೆಮಾಡಿ ಬಹಳ ದೂರದೃಷ್ಟಿಯಿಂದ ಸಭೆಯ ಮುಂದಿಟ್ಟ ಧ್ಯೇಯೋದ್ದೇಶಗಳ ನಿರ್ಣಯವೇ (Objectives Resolution) ಮೈಸೂರಿನ ನೆರೆಹೊರೆ ಪ್ರಾಂತಗಳವರು ಮೈಸೂರಿಗೆ ಸೇರಬಯಸುವುದಾದರೆ ಅವರನ್ನು ಸೇರಿಸಿಕೊಳ್ಳತಕ್ಕ ಅವಕಾಶವಿರಬೇಕೆಂಬುದು. ಆದರೆ ಒಂದು ವಿಷಯ ಮಾತ್ರ ನಿರ್ದಿಷ್ಟವಾಗಿ ಅಂದು ಯಾರ ಮನಸ್ಸಿನಲ್ಲೂ ಇರಲಿಲ್ಲ. ಅದೇನೆಂದರೆ—ಅಕ್ಕಪಕ್ಕದ ಪ್ರಾಂತಗಳನ್ನು ಸೇರಿಸಿಕೊಳ್ಳಬೇಕಾದರೆ, ಬರೀ ಕೊಡಗು ಅಥವಾ ಕೊಳ್ಳೇಗಾಲದಷ್ಟೇ ಇರಬೇಕೇ, ಇನ್ನೂ ಮುಂದಕ್ಕೆ ಹೋಗಬೇಕೇ ಅಥವಾ ಮುಂದಕ್ಕೆ ಹೋಗುತ್ತಾ ಹೋಗುತ್ತಾ ಗೋದಾವರಿಯವರೆಗೂ ಹೋಗಬಹುದೇ ಎಂಬುದು ತೀರ್ಮಾನವಾಗಿರಲಿಲ್ಲ. ಈಗಲೂ ಕೂಡ ಎರಡು ಕರ್ಣಾಟಕಬೇಕೆಂದು ಹೇಳತಕ್ಕ ನನ್ನ ಮಾನ್ಯ ಸ್ನೇಹಿತರುಗಳು ಈ ನಿರ್ಣಯದ ತತ್ವಕ್ಕನುಗುಣವಾಗಿಯೇ ನಡೆಯುತ್ತಿದ್ದಾರೆ; ಹಾಗೆಯೇ ಒಂದು ಕರ್ಣಾಟಕ ಬೇಕೆನ್ನುವವರೂ ಅದಕ್ಕನುಗುಣವಾಗಿಯೇ ನಡೆಯುತ್ತಿದ್ದಾರೆ; ಅದರಲ್ಲಿ ವ್ಯತ್ಯಾಸವಿಲ್ಲ.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಅದು ಬುದ್ಧಿವಂತಿಕೆಯ ಮಾತು.

ಶ್ರೀ ಡಿ. ಆರ್ ಕರಿಗೌಡ (ಹಾಸನ).—ಹಿಂಸೆ !

ಶ್ರೀ ಕೆ. ಹನುಮಂತಯ್ಯ.—ಶ್ರೀಮಾನ್ ತಿಮ್ಮಪ್ಪಗೌಡರು 'ಬುದ್ಧಿವಂತಿಕೆ' ಎನ್ನುತ್ತಿದ್ದಾರೆ; ಶ್ರೀಮಾನ್ ಕರಿಗೌಡರು 'ಹಿಂಸೆ' ಎನ್ನುತ್ತಿದ್ದಾರೆ. ಇವರ ಬುದ್ಧಿವಂತಿಕೆಗೂ ಅವರ ಹಿಂಸೆಗೂ ವ್ಯತ್ಯಾಸವೇನೋ ನನಗೆ ಗೊತ್ತಾಗುವುದಿಲ್ಲ.

ಆದರೂ ಇದು ನಿಶ್ಚಯ; ಇದನ್ನು ನಾನು ಸ್ಪಷ್ಟವಾಗಿ ತಿಳಿದುಕೊಳಬೇಕು. ಆ ದಿವಸ ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಅಡಿಪಾಯವನ್ನೇನೋ ಹಾಕಿದೆವು. ಆದರೆ ಕಟ್ಟಡದ ಪ್ಲಾನನ್ನು ನಿರ್ದಿಷ್ಟವಾಗಿ ಹಾಕಲಿಲ್ಲ. ಎಷ್ಟು ರೂಮುಗಳಿರಬೇಕು, ಎಷ್ಟು ಮಹಡಿಗಳಿರಬೇಕೆಂದು ಹೇಳಲಿಲ್ಲ.

ಒಬ್ಬ ಸದಸ್ಯರು.—ಈಗಿನ ವಿಧಾನಸೌಧ ಆದ ಹಾಗೆ.

ಶ್ರೀ ಕೆ. ಹನುಮಂತಯ್ಯ.—ವಿಧಾನಸೌಧ ಆದ ಹಾಗೆಯೇ ಇದೂ ಆಗುವುದು.

(ಕರತಾಡನಗಳು)

ಆದ್ದರಿಂದ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂಬ ವಾದ ಯಾರದೂ ಅಲ್ಲ. ಆ ರೀತಿ ಎಂದೂ ಯಾರೂ ವಾದ ಮಾಡಿಯೂ ಇಲ್ಲ. ಮೈಸೂರು ವಿಸ್ತರಿಸಬೇಕು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ವಿಸ್ತರಿಸಬೇಕೆಂದರೆ ಎಲ್ಲಿಯವರೆಗೆ! ಅದನ್ನು ಮಾತ್ರ ತೀರ್ಮಾನ ಮಾಡಿಲ್ಲ. ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ರಾಮಚಂದ್ರರಾಯರು ನಿನ್ನೆ ಕೊಟ್ಟ ಹೇಳಿಕೆಯಲ್ಲೂ ಸೌತ್ ಕೆನರ, ಕೊಡಗು, ಕೊಳ್ಳೇಗಾಲ, ಇವುಗಳು ಸೇರಿ ಒಂದು ಕರ್ನಾಟಕವಾಗಲಿ ಎಂದು ಹೇಳಿ ಅವರೂ ಕೂಡ ಮೈಸೂರು ವಿಸ್ತಾರವಾಗಲಿ ಎಂದು ಹೇಳಿದ್ದಾರೆ. ಆದರೆ ಆಡಳಿತ ದೃಷ್ಟಿಯಿಂದ ಎರಡು ಕರ್ಣಾಟಕವಾಗಲಿ ಎಂದು ಹೇಳಿದ್ದಾರೆ; ಅಷ್ಟೇ. ಅವರು ಹೇಳುವುದರಲ್ಲಿ ತಪ್ಪೇನೂ

ಇಲ್ಲ. ಆ ಅಭಿಪ್ರಾಯವನ್ನೂ ಯಾವ ರೀತಿಯಲ್ಲೂ ತಪ್ಪಾಗಿ ತಿಳಿದುಕೊಳ್ಳುವ ಆವಶ್ಯಕವೂ ಇಲ್ಲ. ಆದರೆ, ಈ ದಿವಸ ನಾವೆಲ್ಲಾ ನಿರ್ಧರಿಸಬೇಕಾದದ್ದು ಈ ವಿಸ್ತರಣ ಎಲ್ಲಿಯವರೆಗೆ ಹೋಗಬೇಕೆಂಬುದು.

(ಸಭೆಯಲ್ಲಿ ನಗು.)

ನನಗಾದರೋ ಅಷ್ಟಾಗಿ ಬುದ್ಧಿವಂತಿಕೆಯಿಲ್ಲದಿದ್ದರೂ ನಾನು ಬಹಳ ಬುದ್ಧಿವಂತಿಕೆಯಿಂದ ಕೆಲಸ ಮಾಡುತ್ತೇನೆ, ಮಾತನಾಡುತ್ತೇನೆ ಎಂದು ನನ್ನ ಮಿತ್ರರು ಕೆಲವರು ಆರೋಪಣೆ ಮಾಡುತ್ತಾರೆ. ಅದನ್ನು ನಿಂದಾಸ್ತುತಿಯೆನ್ನಬಹುದು ಅಷ್ಟೆ. ನಾನೇನಿದ್ದರೂ ಒಬ್ಬ ಹಳ್ಳಿಯವನ ಹಾಗೆ ಯೋಚನೆಮಾಡುತ್ತೇನೆ, ಅಷ್ಟೆ. ನಾವು ಕುಳಿತಿರುವಾಗ ನಮ್ಮ ಮನೆಯ ಮುಂದೆ ನಾಲ್ಕು ಜನರು ಬಂದುನಿಂತರೆ, 'ಇಬ್ಬರುಮಾತ್ರ ಒಳಕ್ಕೆ ಬನ್ನಿ. ಇನ್ನಿಬ್ಬರು ಹೊರಗಡೆಯೇ ಇರಿ' ಎಂದರೆ ಹೇಗೆ? It is a matter of sheer courtesy and commonsense; it involves no political considerations. ಆದ್ದರಿಂದ ನಾನು ಈ ಸಮಸ್ಯೆಯನ್ನು ಎಷ್ಟು ಯೋಚನೆಮಾಡಿದರೂ ಕೂಡ ನನಗೆ ಬೇರೆ ದಾರಿಯೇ ಹೊಳೆಯುತ್ತಿಲ್ಲ. ನಾನು ಪೂರ್ತಿಯಾಗಿ ಯೋಚನೆಮಾಡಿಲ್ಲವೆಂದು ತಾವು ತಿಳಿದುಕೊಳ್ಳಬಾರದು. ಆದರೆ ವಾಸ್ತವವಾಗಿ ಈ ದಿವಸ ನನಗೆ ಉಂಟಾಗಿರುವಷ್ಟು ಸಂಕಟ ನನ್ನ ಈ ಇಪ್ಪತ್ತು ವರ್ಷಗಳ ರಾಜಕೀಯದಲ್ಲಿ ಎಂದೂ ಉಂಟಾಗಿರಲಿಲ್ಲ. 'ಏಕದೇಹ ನ್ಯಾಯ' ಎಂದು ಹೇಳಿದಷ್ಟು ಸ್ನೇಹ ಯಾರೊಡನೆ ಬೆಳೆದಿತ್ತೋ ಅವರ ಕೈಯಲ್ಲೇ ಅಪಘಾತಕ್ಕೀಡಾಗುವ ಪರಿಸ್ಥಿತಿ ಬಂದರೂ ಅದನ್ನು ಸಹಿಸಿಕೊಂಡು ನಾನು ಕೆಲಸ ಮಾಡಬೇಕಾಗಿದೆ. ಅಷ್ಟರಮಟ್ಟಿಗೆ ದುಃಖ ಉಂಟಾಗಿದೆ! ಅನೇಕಸಾರಿ ಗಡಿಯಾರದ ಪೆಂಡುಲಮ್ಮಿನ ಹಾಗೆ, ಈ ಸ್ನೇಹಿತರ ಮಾತು ಕೇಳಲೇ, ಆ ಸ್ನೇಹಿತರ ಮಾತು ಕೇಳಲೇ ಎಂದು ನನ್ನ ಮನಸ್ಸಿನಲ್ಲಿ ಜಿಜ್ಞಾಸೆಯುಂಟಾಗಿದೆ. ಏಕೆಂದರೆ, ನನ್ನ ಸ್ನೇಹಿತರುಗಳಲ್ಲಿ ಕೆಲವರು ಯಾವರೀತಿ ನನ್ನ ಉತ್ಕರ್ಷತೆಗೆ ತಾವು ಕಾರಣರೆಂದು ತಿಳಿದುಕೊಂಡಿದ್ದಾರೋ ಅದೇ ರೀತಿ ಬೇರೆಯವರೂ ಕಾರಣರಾಗಿದ್ದಾರೆಂಬುದನ್ನು ನಾನು ಅರಿತಿದ್ದೇನೆ. ಆದ್ದರಿಂದ, ಕೆಲವರು ಮಾತ್ರ ನನ್ನ ಸ್ನೇಹಿತರು, ಇನ್ನು ಕೆಲವರು ಸ್ನೇಹಿತರಲ್ಲವೆಂದು ಪರಿಗಣಿಸುವುದು ಧರ್ಮವೂ ಅಲ್ಲ, ನ್ಯಾಯವೂ ಅಲ್ಲ.

ಕರ್ನಾಟಕ ಏಕೀಕರಣವಾದಿಗಳಲ್ಲೂ ನನಗೆ ಸ್ನೇಹಿತರಿದ್ದಾರೆ. ಎರಡು ಕರ್ನಾಟಕಕ್ಕಾಗಿ ವಾದಿಸತಕ್ಕ ಗುಂಪಿನಲ್ಲೂ ನನಗೆ ಸ್ನೇಹಿತರಿದ್ದಾರೆ. ಇದರಿಂದ ಏನು ಪ್ರಯೋಜನವಾಯಿತೆಂದರೆ, ಈ ಸ್ನೇಹ ವಾತ್ಸಲ್ಯಗಳನ್ನು ದಾಟಿ ಯಾವ ವಾದದಲ್ಲಿ ಸತ್ಯವಿದೆ ಎನ್ನುವುದನ್ನು ತೀರ್ಮಾನಮಾಡುವುದಕ್ಕೆ ಸಾಧ್ಯವಾಯಿತು. ನಾವು ನಮ್ಮ ಆಗುಹೋಗುಗಳನ್ನೆಲ್ಲಾ ಪ್ರಜಾಪ್ರಭುತ್ವ ತತ್ವಗಳ ಮೇಲೆ ಮುಂದುವರಿಸುತ್ತಿದ್ದೇವೆ. ಆ ಮಾರ್ಗದಲ್ಲೇ ಹೋದರೆ ಈ ಪ್ರಶ್ನೆಯನ್ನು ನಾವು ಸುಲಭವಾಗಿ ಬಗೆಹರಿಸಲು ಸಾಧ್ಯ. ನಾವು ಬೇರೆ ಮಾರ್ಗದಲ್ಲಿ ಹೋದರೆ ಈ ಮೈಸೂರಿನ ಪ್ರಶ್ನೆಯನ್ನು ಎಂದಿಗೂ ತೀರ್ಮಾನ ಮಾಡುವುದಕ್ಕೆ ಆಗುವುದಿಲ್ಲ. ಹಿಂದೆ ಫೈನಾನ್ಷಿಯಲ್ ಇಂಟಿಗ್ರೇಷನ್ ಆದಾಗ ಎಲ್ಲಾ ವಿಧವಾದ ಇಂಟಿಗ್ರೇಷನ್‌ಗಳಿಗೂ ದಾರಿಯಾಯಿತು. ಯಾವ ದಿವಸ ಫೈನಾನ್ಷಿಯಲ್ ಇಂಟಿಗ್ರೇಷನ್‌ಗೆ ನೀವು ಒಪ್ಪಿದಿರೋ, financial integration, political integration, territorial integration—all kinds of integration were completed that day. There is nothing like political integration being kept separate from financial integration.

ಈ ದಿವಸ ಎಲ್ಲರೂ ಹೊಡೆದಾಡುತ್ತಿರುವುದು ಅವರವರ ಸುಖ ಸೌಕರ್ಯಗಳಿಗಾಗಿಯೇ! ಈ ಸುಖ ಸೌಕರ್ಯಗಳು ಉಂಟಾಗುವುದು ಹಣದಿಂದ. ಆದಕಾರಣ ಈ ಫೈನಾನ್ಷಿಯಲ್ ಇಂಟಿಗ್ರೇಷನ್ ಎನ್ನುವುದು ಯಾವ ದಿವಸ ಆಗಿಹೋಯಿತೋ ಆ ದಿವಸವೇ ಈ ನಮ್ಮ ಇಂಡಿವಿಜ್ಯುಯಾಲಿಟಿಯೂ ಹೊರಟುಹೋಯಿತು. ಆದುದರಿಂದ ತಾವು ಈ ಪ್ರಶ್ನೆಯನ್ನು ಕಾನ್ಸ್ಟಿಟ್ಯೂಷನಲ್ ದೃಷ್ಟಿಯಿಂದಲೂ ನೋಡಬೇಕಾಗಿದೆ. ನಮ್ಮ ಪ್ರತಿನಿಧಿಗಳು ಪಾರ್ಲಿಮೆಂಟಿನಲ್ಲಿದ್ದಾರೆ. ಇಂಡಿಯಾ ದೇಶದೊಡನೆ ನಾವು ಹಣಕಾಸಿನ ವಿಚಾರದಲ್ಲಿ ಎಂದು ಇಂಟಿಗ್ರೇಟ್ ಆಗಿಹೋದೆವೋ ಅಂದೇ ನಾವು ಭಾರತದಲ್ಲಿ ಆಗತಕ್ಕ ಎಲ್ಲಾ ವ್ಯವಹಾರಗಳಿಗೂ ಸಮಭಾಗಿಗಳಾಗಿ ಹೋಗಿದ್ದೇವೆ. ಆದುದರಿಂದ ನಾವು ಕೇವಲ ನಮ್ಮ ಮೈಸೂರು ಒಂದನ್ನೇ ನಮ್ಮ ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡುವುದಕ್ಕೆ ಆಗುವುದಿಲ್ಲ. 1947ರಲ್ಲಿ ಮೈಸೂರು ಸಂಸ್ಥಾನವು ಇಂಡಿಯನ್ ಫೆಡರೇಷನ್ನಿಗೆ ಸೇರಿದಾಗಲೇ ರಾಜಕೀಯ ಮಿಳನ (Political Integration) ಆಯಿತು. ಅನಂತರ 1950ರಲ್ಲಿ ಆರ್ಥಿಕ ಮಿಳನ (Financial Integration) ಆದಾಗ ನಮ್ಮ ಸ್ವಾವಲಂಬನೆ ಕಳೆದುಹೋಯಿತು. ಈಗ ಆಗುತ್ತಿರುವುದು ಪ್ರದೇಶಗಳ ಮಿಳನ (Territorial Integration) ಮಾತ್ರ. ಮೈಸೂರು ವ್ಯಕ್ತಿತ್ವವು ಭಾರತದ ವ್ಯಕ್ತಿತ್ವದಲ್ಲಿ ವಿಲೀನವಾಗಿಹೋಗಿದೆ. ಆದುದರಿಂದ ಮೈಸೂರು ವಿಸ್ತಾರವಾದರೆ ನಾವು ವ್ಯಸನಪಡಬೇಕಾಗಿಲ್ಲ.

ಈಗ ನಾವೇನೋ ಮೈಸೂರು ದೇಶದಲ್ಲಿದ್ದೇವೆ. ಆದರೆ ಮೊನ್ನೆತಾನೆ ಶ್ರೀಯುತ ಭೀಮಪ್ಪನಾಯಕರು ಒಂದು ವಿಚಾರ ತಿಳಿಸಿರುತ್ತಾರೆ. ಈ ದಿವಸ ಮೈಸೂರಿನಲ್ಲಿದ್ದೇವೆಂದು ಹೇಳಿಕೊಳ್ಳುವ ಶ್ರೀ ಎ. ಭೀಮಪ್ಪನಾಯಕರ ಮನೆತನದವರು ಹಿಂದೆ ಚಿತ್ರದುರ್ಗವನ್ನು ಆಳುತ್ತಿದ್ದರು. ಹಾಗೆ ಅವರು ಆಡಳಿತ ನಡೆಸುತ್ತಿದ್ದ ಕಾಲವು ಕೊನೆಗಂಡುದು ಇಲ್ಲಿಗೆ ಬಹಳ ದಿವಸಗಳೇನೂ ಆಗಿಲ್ಲ. ಆದಕಾರಣ ಅದನ್ನು ಈ ದಿವಸ ನಮಗೆ ಬಿಟ್ಟುಕೊಡಿ, ಆ ಕೋಟೆಯನ್ನೆಲ್ಲಾ ರಿಪೇರಿ ಮಾಡಿಸಿಕೊಂಡು ನಾನು ಪುನಃ ಅಲ್ಲಿ ಆಳಬೇಕೆಂಬ ಆಸೆಯಿದೆ ಎಂದು ಕೇಳಿದರು ಎಂದುಕೊಳ್ಳೋಣ. ಅವರು ಚಿತ್ರದುರ್ಗದ ಜಿಲ್ಲೆಯವರನ್ನು ಕೂಡ ಅದಕ್ಕೇ ಒಪ್ಪಿಸಿಕೊಂಡರು ಅನ್ನೋಣ. ಹಾಗೆ ಅವರು ಕೇಳುತ್ತಿದ್ದಾರಲ್ಲಾ ಎಂದು ನಾವು ಅದನ್ನು ಒಪ್ಪಿಕೊಳ್ಳುವುದಕ್ಕಾಗುತ್ತದೆಯೇ! ಈ ದಿವಸ ಕೊಡಗಿನಲ್ಲಿರತಕ್ಕ ಸುಮಾರು ಎರಡು ಲಕ್ಷ ಮೂವತ್ತು ಸಾವಿರ ಜನರು ಒಮ್ಮತಾಭಿಪ್ರಾಯದಿಂದ ನಮ್ಮ ಸಂಸ್ಥಾನ ಈಗ ಹೇಗಿದೆಯೋ ಹಾಗೆಯೇ ಇದನ್ನು ಬಿಟ್ಟುಕೊಡಬೇಕೆಂದು ಕೇಳುತ್ತಿದ್ದಾರೆ. ಆದರೆ ಆ ವಾದವನ್ನು ಯಾರು ಒಪ್ಪಲು ಸಾಧ್ಯ? ಯಾರೂ ಒಪ್ಪಲಾರರು. ಶ್ರೀ ಎ. ಜಿ. ರಾಮಚಂದ್ರರಾಯರೂ ಸಹ ಒಪ್ಪುವುದಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಗಳ ಮಂತ್ರಿಗಳು).—ಕೊಡಗು ದೇಶದವರು ಆ ರೀತಿ ಸೇರಿಸಿಕೊಳ್ಳಲು ಅವರಿಗೆ ಇಷ್ಟವಿಲ್ಲ ಎಂದು ಹೇಳುವುದಾದರೆ ಅವರು ಹಾಗೆಯೇ ಇರಬಹುದು ಎಂದು ನಾನು ಹೇಳುತ್ತೇನೆ.

Sri K. HANUMANTHAIYA.—Very good. I accept your explanation, though not convincing.

ಆದುದರಿಂದ ನಮ್ಮ ಪ್ರಜಾಭಿಪ್ರಾಯವೂ ಮತ್ತು ಅಖಿಲ ಭಾರತ ಹಿತದೃಷ್ಟಿಯೂ ಈ ಎರಡೂ ಒಂದು ಸಮನ್ವಯವಾಗಿ ಈ ರಾಜ್ಯಗಳ ಪುನರ್ವಿಂಗಡಣೆ ಆಗ ಬೇಕಾಗಿದೆ. ಒಂದನ್ನು ಬಿಟ್ಟು ಒಂದು ಮಾಡುವುದಕ್ಕೆ ಆಗುವುದಿಲ್ಲ. ಈ 'ಸಿ' ಸ್ಟೇಟುಗಳು ಆಡಳಿತ ದೃಷ್ಟಿಯಿಂದ ಬಹಳ ಚಿಕ್ಕವುಗಳಾಗಿರುವುದರಿಂದ ಇವುಗಳಿರುವುದು ಸೂಕ್ತವಲ್ಲ ಎನ್ನುವುದಿರಲಿ, ಇವು ಇರುವುದು ನಮ್ಮ ಕಾನ್ಸ್ಟಿಟ್ಯೂಷನ್ನಿಗೆ ಅನುಗುಣವಾಗಿಲ್ಲ. ಇವುಗಳನ್ನು ತೆಗೆದುಹಾಕುವುದು ಉಚಿತ ಎಂದು ನಾನು ಹೇಳಿದುದು ಒಪ್ಪಲ್ಪಟ್ಟಿದೆ. ಇದು ತಮಗೆಲ್ಲರಿಗೂ ಈಗಾಗಲೇ ತಿಳಿದಿರತಕ್ಕ ಅಂಶವಾಗಿದೆ. ಆ 'ಸಿ' ಸ್ಟೇಟುಗಳೂ ಸಹ ಇದಕ್ಕೆ ತಮ್ಮ ಒಪ್ಪಿಗೆ ಇದೆ ಯೆಂಬುದಾಗಿ ಸೂಚಿಸುವ ಮಟ್ಟಕ್ಕೆ ಬಂದಿವೆ. ಆದರೆ ನಾವು ಈ ರಾಜ್ಯಗಳ ಪುನರ್ವಿಂಗಡಣೆಯ ಬಗ್ಗೆ ಈ ನಮ್ಮ ಮೈಸೂರು ಶಾಸನ ಸಭೆಯಲ್ಲಿ ಕುಳಿತುಕೊಂಡು ಏನು ಒಂದು ತೀರ್ಮಾನಕ್ಕೆ ಬರುತ್ತೇವೆ ಎನ್ನುವುದೇ ಮುಖ್ಯವಲ್ಲ. ನಮಗೆ ಇರತಕ್ಕ ಅವಕಾಶ, ಅಭಿಪ್ರಾಯ ಕೊಡುವುದು ಮಾತ್ರ, ತೀರ್ಮಾನ ಮಾಡತಕ್ಕ ಅಧಿಕಾರ ಪಾರ್ಲಿಮೆಂಟಿನವರದು. ಆದುದರಿಂದ ಪಾರ್ಲಿಮೆಂಟಿನ ತೀರ್ಮಾನವೇನಿದೆಯೋ ಅದರ ಮುಂದೆ ನಮ್ಮ ಅಭಿಪ್ರಾಯ ನಿಲ್ಲುವುದಿಲ್ಲ. ಈ ವಿಚಾರದಲ್ಲಿ ಭಾರತದ ಪಾರ್ಲಿಮೆಂಟು ಅಲ್ಲಿ ಬರತಕ್ಕ ಅಭಿಪ್ರಾಯಗಳನ್ನೆಲ್ಲ ಕ್ರೋಡೀಕರಿಸಿಕೊಂಡು ಅದಕ್ಕನುಸಾರವಾಗಿ ಕಾನ್ಸ್ಟಿಟ್ಯೂಷನ್ನನ್ನು ತಿದ್ದುಪಡಿ ಮಾಡಿ, ಅನಂತರ ಈ ವಿಚಾರವನ್ನು ಒಂದು ಕಾರ್ಯರೂಪಕ್ಕೆ ತರುತ್ತಾರೆ. ಹೀಗಿರುವಾಗ ಮೈಸೂರಿನ ವಿಚಾರದ ಬಗ್ಗೆ ನಮ್ಮ ಅಭಿಪ್ರಾಯದಿಂದಲೇ ಏನೂ ಆಗುವುದಿಲ್ಲ. ಈ ವಿಚಾರದಲ್ಲಿ ನಮ್ಮ ಅಕ್ಕಪಕ್ಕದ ರಾಜ್ಯಗಳಾದ ಮದ್ರಾಸ್, ಕೊಡಗು, ಆಂಧ್ರ, ಬೊಂಬಾಯಿ ಮತ್ತು ಹೈದರಾಬಾದ್—ಇಷ್ಟು ರಾಜ್ಯಗಳವರ ಅಭಿಪ್ರಾಯಗಳೂ ಬೇಕು.

How can we say that the opinion of this House alone should have value as against the opinion of all other four Assemblies and of the Parliament? There is neither political justification nor is there Constitutional sanction for it.

ಆದುದರಿಂದ ಈ ವಿಚಾರದಲ್ಲಿ ನಮ್ಮ ಅಂತಸ್ತು ಎಷ್ಟಿದೆ, ನಮ್ಮ ಹಕ್ಕು ಎಲ್ಲಿಯವರೆಗಿದೆ ಎನ್ನುವುದನ್ನೆಲ್ಲಾ ತಾವು ಅಳತೆಮಾಡಿ ತೂಗಿ ಸರಿನೋಡದೆ ನಾವು ಕುಳಿತಿದ್ದೇ ನಮ್ಮ ಸಿಂಹಾಸನ; ನಮ್ಮ ಕಣ್ಣಿಗೆ ಕಾಣಿಸತಕ್ಕದ್ದೇ ನಮ್ಮ ಸಾಮ್ರಾಜ್ಯವೆಂದು ಮಾತನಾಡಬಾರದು. ಪಾರ್ಲಿಮೆಂಟಿನಲ್ಲಿ ಭಾರತದ ಎಲ್ಲಾ ಪ್ರದೇಶಗಳ ಪ್ರತಿನಿಧಿಗಳೂ ಇದ್ದಾರೆ. ಅವರೆಲ್ಲರೂ ಸೇರಿ ತೀರ್ಮಾನ ಮಾಡಬೇಕಾಗಿದೆ. ನಾವಿಲ್ಲಿ ನಮ್ಮ ನಮ್ಮ ಬೀದಿಗಳಲ್ಲೇನೋ ಈ ಬಗ್ಗೆ ವ್ಯಾಜ್ಯ ನಡೆಸಬಹುದು. ನೀವು ಒಂದು ರೀತಿ ಕೇಳಿದರೆ ಶ್ರೀ ಭೀಮಪ್ಪನಾಯಕರೇ ಒಂದು ರೀತಿ ಕೇಳುತ್ತಾರೆ. ಹೀಗೆ ಕೇಳುವುದನ್ನು ನ್ಯಾಯ ಎಂದು ಒಪ್ಪತಕ್ಕ ಜನರು ಎಷ್ಟಿದ್ದಾರೆ? ಈಗ ಹೊಸದಾಗಿ ನಿರ್ಮಾಣವಾಗಲಿರತಕ್ಕ ರಾಜ್ಯದಲ್ಲಿ ಸುಮಾರು ಎರಡು ಕೋಟಿ ಜನಗಳಿರಬಹುದು. ಇಂದಿನ ಅಂಕಿ ಅಂಶಗಳ ಪ್ರಕಾರ ಒಂದು ಕೋಟಿ 90 ಲಕ್ಷ ಜನಸಂಖ್ಯೆ ಇರುತ್ತದೆ. ಇದರ ಜೊತೆಗೆ ಬಳ್ಳಾರಿ ಜಿಲ್ಲೆಯೂ ಇತರ ಪ್ರದೇಶಗಳೂ ಸೇರಿಕೊಂಡರೆ ಎರಡು ಅಥವಾ ಸ್ವಲ್ಪ ಹೆಚ್ಚು ಕಡಮೆ ಎರಡೂ ಕಾಲು ಕೋಟಿ ಪ್ರಜಾಸಂಖ್ಯೆಯಾಗಬಹುದು. ಆದರೆ, ಇಷ್ಟು ಜನರೂ ಭಾರತೀಯರೇ ಆಗಿದ್ದಾರೆ. ಒಟ್ಟುಗೂಡುವ ಪ್ರಜೆಗಳು ಮದ್ರಾಸಿನಿಂದಲೇ ಬಂದಿರಲಿ, ಕೊಡಗಿನಿಂದಲೇ ಬಂದಿರಲಿ ಅಥವಾ ಮತ್ತೆ ಯಾವ ಭಾಗದಿಂದಲೇ ಬಂದಿರಲಿ, ಅಂತೂ ಈ ಒಟ್ಟು ಎರಡೂಕಾಲು ಕೋಟಿ ಜನರ ಅಭಿಪ್ರಾಯವೇನಿದೆ ಎನ್ನುವುದನ್ನು ಪಾರ್ಲಿಮೆಂಟಿನಲ್ಲಿ ವಿಮರ್ಶೆ ಮಾಡುತ್ತಾರೆ. ಆದರೆ ನಾನು ಈ ದಿವಸ ತಮಗೊಂದು ವಿಚಾರವನ್ನು ಖಚಿತವಾಗಿ ಹೇಳುತ್ತೇನೆ. ಆ ಅಭಿಪ್ರಾಯವನ್ನು ನೀವು ಒಪ್ಪಿಕೊಳ್ಳಲೇ ಬೇಕೆಂಬ ನಿರ್ಬಂಧವೇನೂ ಇಲ್ಲ. ಈ ದಿವಸ ಮೈಸೂರಿನ ಹೊರಗಿರತಕ್ಕ ಸುಮಾರು ಒಂದು ಕೋಟಿ ಜನರೆಲ್ಲರೂ ಒಂದೇ ವಾಕ್ಯದಿಂದ ಈ ಮೈಸೂರು ಸೇರಿಕೊಂಡು ಒಂದು ಹೊಸ ಪ್ರಾಂತ ಆಗಬೇಕೆಂದು ಹೇಳುತ್ತಾರೆ. ಈ ಬಗ್ಗೆ ಮೈಸೂರಿನಲ್ಲಿ ಒಂದು ಒಮ್ಮತವಿಲ್ಲ ಎನ್ನುವುದೇನೋ ಸಹಜವಾಗಿದ್ದರೂ, ಈಗಿರತಕ್ಕ ಮೈಸೂರು ಹೀಗೇ ಉಳಿಯಲಿ, ಇದು ಅನ್ಯ ಪ್ರಾಂತ್ಯಗಳೊಂದಿಗೆ ಸೇರುವುದು ಬೇಡ ಎಂದು ಹೇಳತಕ್ಕ ವಾದವೇನಾದರೂ ಒಂದು ಒಮ್ಮತದಿಂದ ಕೂಡಿದೆಯೇ? ಮೈಸೂರು ದೇಶದಲ್ಲಿ ಇದೇ ರೀತಿ ನಾವು ಪ್ರತ್ಯೇಕವಾಗಿ ಎಷ್ಟು ದಿವಸ ಗಳಿದ್ದೆವು, ಇದು ಸಾಧ್ಯವಿಲ್ಲ, ಆದುದರಿಂದ ನಾವೆಲ್ಲರೂ ಸೇರಿ ಒಟ್ಟಾಗೋಣ, ಎಂದು ಹೇಳತಕ್ಕ ವಾದದಲ್ಲಿ ಏಕಾಭಿಪ್ರಾಯವಿಲ್ಲ ಎಂದು ಹೇಳುವುದರಲ್ಲಿ ಏನೂ ಪ್ರಯೋಜನವಿಲ್ಲ. ಆದರೆ ಈಗ ಮುಖ್ಯವಾಗಿ ಬಂದಿರತಕ್ಕ ಪ್ರಶ್ನೆ ಬಹುಮತ ಯಾರ ಕಡೆಗಿದೆ ಎನ್ನುವುದು. ಈ ದಿವಸ ನಾವು ನಮ್ಮ ನಮಗೆ ಹಿತಕರವಾಗತಕ್ಕ ಮಾತುಗಳನ್ನೇನೋ ಆಡಿಕೊಳ್ಳಬಹುದು. ಇದರಿಂದ ಈ ಪ್ರಶ್ನೆ ಬಗೆಹರಿಯುವುದಿಲ್ಲ. ಈ ವಿಚಾರದಲ್ಲಿ ಒಂದು ಪ್ಲೆಬಿಸೈಟನ್ನು ತೆಗೆದುಕೊಳ್ಳಬೇಕೆಂದರೆ ಅದು ಸಾಧ್ಯವಿಲ್ಲ. ಆದುದರಿಂದ ಖಚಿತವಾಗಿ ಇಷ್ಟೇ ಜನರು ಪರವಾಗಿದ್ದಾರೆ ಅಥವಾ ಇಷ್ಟೇ ಜನರು ವಿರೋಧವಾಗಿದ್ದಾರೆ ಎಂದು ನಿಷ್ಕರ್ಷೆ ಮಾಡುವುದಕ್ಕಾಗುವುದಿಲ್ಲ. ಅಂತೂ ಹಾಗೆ ತೀರ್ಮಾನ ಮಾಡಲು ಒಂದು ಸುಲಭವಾದ ದಾರಿಯಿಲ್ಲ. ಇನ್ನುಳಿದಿರತಕ್ಕ ಮಾರ್ಗ ಎಂದರೆ ಶಾಸನ ಸಭೆಯ ಅಭಿಪ್ರಾಯ. ಈ ದಿವಸ ಈ ವಿಚಾರದಲ್ಲಿ ಶಾಸನ ಸಭೆಯ ಅಭಿಪ್ರಾಯ ಹೆಚ್ಚು ಕಡಮೆ ಅತ್ತ ಅರ್ಧ ಇತ್ತ ಅರ್ಧ ಇರಬಹುದು. ಎಂದರೆ ನಮ್ಮ ಸಂಸ್ಥಾನದ ಒಟ್ಟು ಒಂದು ಕೋಟಿ ಪ್ರಜಾಸಂಖ್ಯೆಯಲ್ಲಿ 50 ಲಕ್ಷ ಜನರು ಇದರ ಪರವಾಗಿದ್ದಾರೆ ಎಂದ ಹಾಗಾಯಿತು. ಮೈಸೂರಿನ ಹೊರಗೆ ಇರತಕ್ಕ ಸುಮಾರು ಒಂದು ಕೋಟಿ ಜನರೂ ಕಮಿಷನ್ನಿನ ಶಿಫಾರಸನ್ನು ಏಕಕಂಠದಿಂದ ಸ್ವಾಗತಿಸಿರುತ್ತಾರೆ. ಇದರ ಜತೆಗೆ ಮೈಸೂರಿನ ಸುಮಾರು 50 ಲಕ್ಷ ಜನರೂ ಸೇರಿ, ಸುಮಾರು ಒಂದೂವರೆ ಕೋಟಿ ಜನ ಆ ಎಸ್. ಆರ್. ಸಿ. ರಿಪೋರ್ಟಿನಲ್ಲಿ ಸೂಚಿಸಿರತಕ್ಕ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾರೆ ಎಂದು ಕೇಂದ್ರ ಪಾರ್ಲಿಮೆಂಟಿಗೆ ಗೊತ್ತಾದರೆ, ಹಾಗಾದರೆ ಸರಿ ಎಂದು ಹೇಳಿ ಪಾರ್ಲಿಮೆಂಟಿನವರೂ ಆ ಎಸ್. ಆರ್. ಸಿ. ವರದಿಯನ್ನು ಒಪ್ಪಿಯೇ ಒಪ್ಪುತ್ತಾರೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಪಾರ್ಲಿಮೆಂಟಿನಲ್ಲಿ ತೀರ್ಮಾನವಾಗಬೇಕಾದ ಇರತಕ್ಕ ವಿಚಾರವನ್ನು ಈಗೇಕೆ ತಾವು ಹೇಳುತ್ತಿದ್ದೀರಿ?

ಅಧ್ಯಕ್ಷರು.—ತಮ್ಮ ಅಭಿಪ್ರಾಯಗಳೇನಿವೆಯೋ ಅವುಗಳನ್ನು ಸೂಚಿಸುವುದಕ್ಕೆ ತಮಗೆ ಕಾಲ ಅವಕಾಶವಿದೆ. ಒಬ್ಬ ಸದಸ್ಯರು ಮಾತನಾಡುತ್ತಿರುವಾಗ ತಾವು ಹೀಗೆಲ್ಲಾ ಮಧ್ಯ ಮಧ್ಯೆ ಪ್ರವೇಶಿಸಬಾರದು.

ಶ್ರೀ ಕೆ. ಹನುಮಂತಯ್ಯ.—ಅವರು ಯಾವಾಗಲೂ ಹೀಗೆ ಮಧ್ಯೆ ಪ್ರವೇಶ ಮಾಡಿದವರಲ್ಲ. ಆ ರೀತಿ ಈ ಹೊತ್ತು ಸ್ವಲ್ಪ ಮಧ್ಯೆ ಪ್ರವೇಶ ಮಾಡಿದರೆ ಅದೂ ಸಹ ಒಳ್ಳೆಯದೆ. ಈ ವಿಷಯವನ್ನು ನಾನು ಈ ದಿವಸ ನಿಮ್ಮೆಲ್ಲರ ಸ್ನೇಹಿತನಾಗಿ, ನಿಮ್ಮೆಲ್ಲರ ದಾಸನಾಗಿ ಹೇಳುತ್ತಿದ್ದೇನೆ. ಈ ಸಭೆ ಎರಡು ಮೂರು ಓಟಿನಿಂದ ವರದಿಯನ್ನು ತಿರಸ್ಕಾರ ಮಾಡಿದರೂ ಪಾರ್ಲಿಮೆಂಟಿನವರು ಎಸ್. ಆರ್. ಸಿ. ವರದಿಯಲ್ಲಿ ಸೂಚಿಸಿರತಕ್ಕದ್ದನ್ನು ಒಪ್ಪಿಯೇ ಒಪ್ಪುತ್ತಾರೆ. ತಾವೆಲ್ಲರೂ ತಮ್ಮ ನಿಜವಾದ ಸ್ನೇಹಿತನು ಯಾರು ಎನ್ನುವುದನ್ನು ತಿಳಿದುಕೊಳ್ಳಬೇಕಾಗಿದೆ. ಈ ದಿವಸ ತಮಗೆ ಹಿತವೆನಿಸತಕ್ಕ ರೀತಿಯಲ್ಲಿ ಶ್ರುತಿ ಹಿಡಿಯತಕ್ಕವರು ಯಾರಿರುತ್ತಾರೋ ಅವರು ತಮ್ಮ ಸ್ನೇಹಿತರೋ ಅಥವಾ ಉತ್ತರೋತ್ತರ ಇದು ಹೀಗೆ ಆಗುತ್ತದೆ ಎಂದು ಹೇಳಿ ಅದಕ್ಕೆ ತಮ್ಮ ಮನಸ್ಸನ್ನು ರೂಪಿಸತಕ್ಕವರು ಸ್ನೇಹಿತರೋ? ಇವರಲ್ಲಿ ನಿಜವಾದ ಸ್ನೇಹಿತರಾರು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ತಮಗೆ ಸಮಾಧಾನಕರವಾದ ಮನಸ್ಸು ಇಂದು ಇಲ್ಲದೆ ಇರಬಹುದು. ಈ ವಿಚಾರದಲ್ಲಿ ನಿಜವಾದ ತೀರ್ಮಾನ ಯಾವ ರೀತಿ ಆಗುತ್ತದೆ ಎನ್ನುವುದನ್ನು ಯಾರು ಸರಳವಾದ ರೀತಿಯಲ್ಲಿ ತಿಳಿಸುತ್ತಿದ್ದಾರೆ ಎನ್ನುವುದು ಇಂದಲ್ಲದಿದ್ದರೆ ಮುಂದೆಯಾದರೂ ತಮಗೆಲ್ಲಾ ಗೊತ್ತಾಗಿಯೇ ಆಗುತ್ತದೆ.

ಈ ವಿಚಾರವನ್ನು ನಾವು ಇನ್ನೊಂದು ದೃಷ್ಟಿಯಿಂದಲೂ ನೋಡೋಣ. 'ಮೈಸೂರು ಮೈಸೂರಾಗಿಯೇ ಉಳಿಯಲಿ' ಎನ್ನತಕ್ಕ ವಾದ ಎಲ್ಲಿಯವರೆಗೆ ಉಳಿಯಬಹುದು ಎಂಬ ವಿಚಾರಕ್ಕೆ ಅನ್ವಯಿಸಬಹುದಾದ ಕೆಲವು ವಿಚಾರಗಳನ್ನು ಎಚ್. ಜಿ. ವೆಲ್ಸ್‌ರವರು ತಮ್ಮ "ವರ್ಲ್ಡ್ ಹಿಸ್ಟ್ರಿ"ಯಲ್ಲಿ ಬರೆದಿದ್ದಾರೆ. ಮನುಷ್ಯನಿಗೆ ಜೀವಿಸುವುದಕ್ಕೆ ಒಂದು ಅವಧಿ ಇದೆ. ಒಬ್ಬ ಮನುಷ್ಯನಿಗೆ ಹೆಚ್ಚು ಎಂದು ಹೇಳಿದರೆ ಹೇಗೆ 100-120 ವರ್ಷಗಳ ಆಯಸ್ಸು ಇರುತ್ತದೆಯೋ ಅದೇ ರೀತಿ ಈ ರಾಜ್ಯಗಳಿಗೂ ಸಹ ಹೆಚ್ಚೆಂದರೆ ಎಷ್ಟು ವರ್ಷಗಳ ಆಯಸ್ಸು ಇರುತ್ತದೆ. ಎನ್ನತಕ್ಕ ವಿಚಾರವನ್ನೂ ಆತ ಆ ಚರಿತ್ರೆಯಲ್ಲಿ ಬರೆದಿದ್ದಾನೆ. ಒಂದು ರಾಜ್ಯ ಉದಯಿಸಿದ ಮೇಲೆ ಅದು 200-300 ಅಥವಾ 400 ವರ್ಷಗಳ ಮೇಲೆ ಯಾವುದಾದರೂ ಬದಲಾವಣೆ ಆಗಲೇಬೇಕು; ಹಾಗೆ ಆಗಿಯೇ ಆಗುತ್ತದೆ ಎಂದು ಆತ ಅದರಲ್ಲಿ ಬರೆದಿರುತ್ತಾನೆ. ತಾವು ಈ ದಿನ ಯಾವ ಒಂದು ಡೈನಾಸ್ಟಿಯನ್ನೇ ತೆಗೆದುಕೊಳ್ಳಿ. ಶ್ರೀ ವಿದ್ಯಾರಣ್ಯರಂಥ ಮಹನೀಯರೇ ಕೇವಲ ಶುಭ ಘಳಿಗೆಯನ್ನು ಗುಣಿಸಿ ಕಟ್ಟಿದಂಥ ರಾಜ್ಯವೇ ಅಳಿದು ಹೋಯಿತೆಂದು ಹೇಳುವಾಗ ಬಾಕಿ ರಾಜ್ಯಗಳ ವಿಚಾರದಲ್ಲಿ ಹಾಗಾಗುವುದು ಏನಾಶ್ಚರ್ಯ! ಇದೆಲ್ಲಾ ಸೃಷ್ಟಿ ನಿಯಮದ ಪ್ರಕಾರ ನಡೆಯುತ್ತಿದೆ. ಆದದರಿಂದ ನಾವು ಹಾಗೆ ಸೃಷ್ಟಿ ನಿಯಮಕ್ಕೊಳಗಾಗಿ ನಡೆಯತಕ್ಕ ವಿಚಾರಗಳ ಜೊತೆಗೆ ವ್ಯಾಜ್ಯವಾಡುವುದಕ್ಕೆ ಹೋದರೆ ಅದರಲ್ಲಿ ಏನು ಬುದ್ಧಿವಂತಿಕೆಯಿದೆ!

ಈ ದಿವಸ ಇರುವ ಮೈಸೂರು ರಾಜ್ಯದ ಮೇಲೆ ನಮಗೆಲ್ಲಾ ಅಭಿಮಾನವಿದೆ. ಆದರೆ ಈ ನಮ್ಮ ಮೈಸೂರು ಹೇಗೆ ಇದೆಯೋ ಹಾಗೇ ಯಾವಾಗಲೂ ಇತ್ತೇನು? ಇದರ ಮೂಲ ವೃತ್ತಾಂತವನ್ನು ನೋಡಿದರೆ 1060ನೇ ಇಸವಿಯಲ್ಲಿ ಈಗಿರತಕ್ಕ ಮೈಸೂರು ರಾಜ್ಯದಲ್ಲಿ ಆರು ಪಾಳೆಯಪಟ್ಟುಗಳು ಪಾಳೇಗಾರರ ಆಡಳಿತದಲ್ಲಿದ್ದವು. ಆ ಆರು ಜನ ಪಾಳೇಗಾರರು ಕಟ್ಟಿದ ಪಾಳೇ ಪಟ್ಟುಗಳಿಂದ ಇಂದಿನ ಮೈಸೂರು ಸಂಸ್ಥಾನ ಸ್ಥಾಪನೆಯಾಯಿತು. ತದನಂತರ ವಿಜಯನಗರದ ಅರಸರು ಅವರನ್ನು ಗೆದ್ದು ಶ್ರೀರಂಗಪಟ್ಟಣದಲ್ಲಿ ತಮ್ಮ ಅಧಿಕಾರಿಯನ್ನಿಟ್ಟು ಆಡಳಿತ ನಡೆಸುವುದಕ್ಕೆ ಪ್ರಾರಂಭಿಸಿದರು. ವಿಜಯನಗರದ ಸಾಮ್ರಾಜ್ಯ 200ರಿಂದ 220 ವರ್ಷಗಳವರೆಗೆ ಇದ್ದಿತು. ಅನಂತರ ಬಿಜಾಪುರದ ಸುಲ್ತಾನರು ಮೈಸೂರಿನ ಕೆಲವು ಭಾಗಗಳನ್ನು ಗೆದ್ದು ಶಿರಾವನ್ನು ರಾಜಧಾನಿಯಾಗಿ ಮಾಡಿದರು. ಆಗ Bijapur Sultanate extended to Bangalore ಎಂದು ಹೇಳುತ್ತಾರೆ. ಈಗ Bangalore Sultanate will extend to Bijapur ಎಂದು ಹೇಳಿದ ಹಾಗಾಯಿತು. ಇದನ್ನು ಸೃಷ್ಟಿ ನಿಯಮದಲ್ಲಿ ಆಗತಕ್ಕ ಮುಯ್ಯಿಗೆ ಮುಯ್ಯಿ ಎಂದು ತಿಳಿದುಕೊಳ್ಳೋಣವೇ!

Sri Mulka GOVINDA REDDY.—The Chief Minister is not addressing the Speaker.

Sri K. HANUMANTHAIYA.—The Speaker like God is everywhere. ಅನಂತರ ಬಿಜಾಪುರದ ಅರಸರೆಲ್ಲರನ್ನೂ ಔರಂಗಜೇಬನು ಗೆದ್ದಮೇಲೆ 1687ರಿಂದ 1707ರವರೆಗೆ ಆತನ ಸಾಮ್ರಾಜ್ಯದಲ್ಲಿ ಈ ರಾಜ್ಯ ಸೇರಿಹೋಯಿತು. ಆಮೇಲೆ ಮರಾಠರು ಅವರಿಗೆ ಚೌತಾಯವನ್ನು ಕೊಟ್ಟು ಮೈಸೂರನ್ನು ತಮ್ಮ ಆಳ್ವಿಕೆಯಲ್ಲಿ ನಡೆಸಿಕೊಂಡು ಬಂದರು. ಮೈಸೂರು ದೇಶ ಒಂದು ಸ್ವತಂತ್ರವಾದ ದೇಶವೆಂದು ಪರಿಗಣಿಸಲ್ಪಟ್ಟಿದ್ದು ಚಾಮರಾಜ ಒಡೆಯರ ಕಾಲದಲ್ಲಿ ಎಂದರೆ 1566ರಲ್ಲಿ. ಇದಾಗಿ ಈಗ 389 ವರ್ಷಗಳಾಗಿವೆ. ಈ 389 ವರ್ಷಗಳಲ್ಲೂ ಕೂಡ ಮೈಸೂರಿಗೆ ಇರತಕ್ಕ ಎಲ್ಲೆ ಹತ್ತಾರು ಸಲ ಹಿಗ್ಗಿದೆ ಮತ್ತು ಕುಗ್ಗಿದೆ. 389 ವರ್ಷಗಳ ಕಾಲದಲ್ಲೂ ಇದು ಒಂದೇ ರೀತಿ ಇದ್ದಿದ್ದಲ್ಲ. ಕೊನೆಗೆ ಹೈದರ್, ಟಿಪ್ಪು ಸುಲ್ತಾನರ ಸೇನಾಧಿಪತ್ಯದಲ್ಲಿ ಈ ರಾಜ್ಯ ವಿಸ್ತಾರವಾಗುತ್ತಾ ಹೋಯಿತು. ಎಲ್ಲಿಯವರಿಗೆ ಅಂದರೆ, ದಕ್ಷಿಣದಲ್ಲಿ ಕೊಚ್ಚಿವರೆಗೆ, ಉತ್ತರದಲ್ಲಿ ಗೋದಾವರಿವರೆಗೆ ಮುಂದುವರಿಯಿತು. ಕಡಪ, ಕರ್ನೂಲು ಪ್ರಾಂತಗಳು ಸೇರಿದವು. ಮದ್ರಾಸು ಸಮುದ್ರ ತೀರದಲ್ಲಿ 20ರಿಂದ 50 ಮೈಲಿಗಳವರೆಗೆ ಗೆರೆ ಎಳೆದರೆ, ಅದನ್ನು ಬಿಟ್ಟು ಉಳಿದ ದಕ್ಷಿಣ ಇಂಡಿಯಾ ದೇಶವೆಲ್ಲಾ ಮೈಸೂರಿಗೆ ಸೇರಿದ ಹಾಗಾಯಿತು. ಮೈಸೂರಿನ ಕೊನೆಯ ಯುದ್ಧವಾಗಿ ಈ ರಾಜ್ಯ ಪುನಃ ಹಂಚಿಕೆಯಾಯಿತು. ಹಂಚಿಕೆಯಾಗುವುದಕ್ಕಿಂತ ಮುಂಚೆ ಇದ್ದ ಮೈಸೂರಿನ ವಿಸ್ತೀರ್ಣ 80,000 ಚದರ ಮೈಲಿ. 1799ರಲ್ಲಿ ಕೊನೆಯ ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಸತ್ತಮೇಲೆ ಮೈಸೂರು ರಾಜ್ಯವನ್ನು ಮೂರು ಭಾಗಗಳಾಗಿ ಮಾಡಿದರು. ಅದರಲ್ಲಿ ಒಂದು ಭಾಗವನ್ನು ನೈಜಾಮರು ತೆಗೆದುಕೊಂಡರು. ಇನ್ನೊಂದು ಭಾಗವನ್ನು ಇಂಗ್ಲೀಷರು ತೆಗೆದುಕೊಂಡರು. ಇನ್ನು ಮಿಕ್ಕ ಒಂದು ಭಾಗವನ್ನು ಅಂದರೆ, 29,000 ಚದರ ಮೈಲಿ ಚಿಲ್ಲರೆ ಭಾಗ ಪ್ರಾಂತವನ್ನು ಮೈಸೂರು ರಾಜಮನೆತನಕ್ಕೆ ಕೊಟ್ಟರು.

Sri D. DEVARAJA URS (Hunsur).—If the Hon'ble Minister will kindly yield, I want some information. Is he arguing to build a new dynasty of Mysore? Or is he arguing for new States according to the Re-organisation Commission Report?

ಶ್ರೀ ಕೆ. ಹನುಮಂತಯ್ಯ.—ಆ ದಿವಸ ಮೈಸೂರು ರಾಜಮನೆತನದವರ ಮೇಲೆ ಬ್ರಿಟಿಷರು ಕೃಪೆಯಿಟ್ಟು, ಮೂರು ಭಾಗಗಳಾಗಿ ಹಂಚುವುದು ಬೇಡ, ಟಿಪ್ಪು ಸುಲ್ತಾನನು ಗೆದ್ದಿದ್ದ ಪ್ರದೇಶವನ್ನೆಲ್ಲಾ ನೀವೇ ತೆಗೆದುಕೊಳ್ಳಿ ಎಂದು ಹೇಳಿದ್ದರೆ, ಈ ಪ್ರಶ್ನೆ ಉದ್ಭವಿಸುತ್ತಲೇ ಇರಲಿಲ್ಲ. ಆಗ ಮೈಸೂರು ಅರಸರು ನೀವು ಎರಡು ಭಾಗಗಳನ್ನು ತೆಗೆದುಕೊಂಡು ಒಂದು ಭಾಗವನ್ನು ಕೊಡಿ ಎಂದು ಕೇಳಲಿಲ್ಲ. ಅವರು ಸಿಂಹಾಸನವನ್ನ ಹಿಂದಕ್ಕೆ ಕೊಟ್ಟರೆ ಸಾಕು ಎಂದು ಇದ್ದರು. ಅವರು ಎಷ್ಟು ಕೊಟ್ಟರೋ ಅಷ್ಟು ಭಾಗವನ್ನು ತೆಗೆದುಕೊಂಡು ಮೈಸೂರು ದೇಶವಾಯಿತು. ನೈಜಾಮರಿಗೆ ಮತ್ತು ಇಂಗ್ಲಿಷರಿಗೆ ಕೊಡುವುದಕ್ಕೆ ಬದಲಾಗಿ ದೇಶಕ್ಕೆಲ್ಲಾ ನೀವೇ ರಾಜರಾಗಿರಿ ಎಂದು ಹೇಳಿದ್ದರೆ ಎಷ್ಟು ಸಂತೋಷವಾಗಿರುತ್ತಿದ್ದರೋ ! ಎಸ್.ಆರ್.ಸಿ. ಯವರು ಏನು ಶಿಫಾರಸು ಮಾಡಿದ್ದಾರೆಂದರೆ, ಆಗ ನೈಜಾಮರು ಏನು ತೆಗೆದುಕೊಂಡಿದ್ದರೋ ಮತ್ತು ಇಂಗ್ಲಿಷರು ಏನು ತೆಗೆದುಕೊಂಡಿದ್ದರೋ, ಅದನ್ನೆಲ್ಲಾ ವಾಪಸು ಕೊಡಿ ಎಂದು ಹೇಳಿದ್ದಾರೆ. ಹಿಂದೆ 80,000 ಚದರ ಮೈಲಿ ಪ್ರದೇಶ ಮೈಸೂರಿಗೆ ಸೇರಿತ್ತು. ಈಗ 72,730 ಚದರ ಮೈಲಿ ಸೇರುತ್ತದೆ. ಬಳ್ಳಾರಿಯ ನಾಲ್ಕು ತಾಲ್ಲೂಕುಗಳು, ಹೊಸೂರು, ಕಾಸರಗೋಡು, ಮಡಕಶಿರ, ಇವೆಲ್ಲಾ ಅಕಸ್ಮಾತ್ತಾಗಿ ಬಂದರೆ, ಆಗ 80,000 ಚದರ ಮೈಲಿ ಆಗುತ್ತದೆ. ನನ್ನ ಸ್ನೇಹಿತರಾದ ಶ್ರೀ ದೇವರಾಜ ಅರಸಿನವರು ನಾನು ಒಂದು ಡೈನಾಸ್ಟಿ ಸ್ಥಾಪನೆ ಮಾಡುವುದಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆಯೇ ಎಂದು ಕೇಳಿದರು. ಈ ರೀತಿ ಒಂದು ಡೈನಾಸ್ಟಿ ಸ್ಥಾಪನೆ ಮಾಡಬೇಕೆಂದು ಶ್ರೀ ಅರಸರವರೂ ನಾನೂ ಇಬ್ಬರೂ ಸೇರಿದರೂ ಆಗುವುದಿಲ್ಲ. ಇದು ರಿಪಬ್ಲಿಕ್, ಆ ರೀತಿ ಮಾಡುವುದಕ್ಕೆ ನಮಗೆ ವಾದಗಳೂ ಇಲ್ಲ. ಸೈನ್ಯ ಮೊದಲೇ ಇಲ್ಲ. ಆದ್ದರಿಂದ ಅವರೂ ನಾನೂ ಈ ವಿಚಾರದಲ್ಲಿ ಯಾವ ಅನುಮಾನವನ್ನೂ ಇಟ್ಟುಕೊಳ್ಳಬೇಕಾಗಿಲ್ಲ. ಈ 80,000 ಚದರ ಮೈಲಿ ಏನಿತ್ತೋ, ಇಂಗ್ಲಿಷರ ಆಳ್ವಿಕೆಯಲ್ಲಿ ಬಲವಂತದಿಂದ ಯಾವ ಪ್ರಾಂತಗಳು ಮೈಸೂರು ದೇಶದಿಂದ ಹರಿದುಹೋಗಿದ್ದವೋ, ಅವು ಆ ಬಲವಂತ ಹೋದಮೇಲೆ ಪುನಃ ತಾಯಿ ಹಸುವಿನ ಜೊತೆಗೆ ಕರು ಹಗ್ಗ ಬಿಚ್ಚಿಬಿಟ್ಟರೆ ಹೇಗೆ ತನ್ನಷ್ಟಕ್ಕೆ ತಾನೇ ಓಡಿ ಬರುತ್ತದೋ ಹಾಗೆಯೇ ಹಾರಿ ಬಂದರೆ ಇದರಲ್ಲಿ ಏನು ಅನ್ಯಾಯವಿದೆ, ಏನು ಅಕ್ರಮವಿದೆ ? ಇಂಗ್ಲೀಷರಿಂದ ಈ ವಿಭಾಗ ಆಗಿತ್ತು. ಈಗ ಇಂಗ್ಲೀಷರು ಹೊರಟುಹೋದರು. ಅವರು ಹೊರಟು ಹೋಗುವುದಕ್ಕೆ ಮುಂಚೆ ಪ್ರಾಂತಕ್ಕೂ ಪ್ರಾಂತಕ್ಕೂ, ಮಧ್ಯೆ ಏನು ಒಂದು ಬಲ, ಒಂದು ಶಕ್ತಿಯಿತ್ತೋ ಆ ಶಕ್ತಿ ಈಗ ಇಲ್ಲ. ಅವರು ಹೋದ ತಕ್ಷಣ ತನ್ನಷ್ಟಕ್ಕೆ ತಾನೇ ಅವು ಸೇರಿದವು. ಆದ್ದರಿಂದ ಮೈಸೂರು ಎಂಬುದಾಗಿ ಏನು ಅಭಿಮಾನ ಇಟ್ಟುಕೊಂಡಿದ್ದೀರೋ, ಅದನ್ನು 29,000 ಚದರ ಮೈಲಿ ವಿಸ್ತೀರ್ಣಕ್ಕೆ ಮಾತ್ರ ಅನ್ವಯಿಸುವುದಾದರೆ ಆ ಅಭಿಮಾನಕ್ಕೆ ಕಾರಣವಿಲ್ಲ. ಮೈಸೂರು ದೇಶದ ಎಲ್ಲೆಯು ಕಾಲ ಕಾಲಕ್ಕೆ ಬದಲಾವಣೆಯಾಗುತ್ತಿದೆ ಪುನಃ ನಿರ್ಮಾಣವಾಗುವ ಮೈಸೂರು ದೇಶ ಮೈಸೂರು ದೇಶವೇ, ಹೊಸರಾಜ್ಯವಲ್ಲ. ಆದ್ದರಿಂದ ಮೈಸೂರು ಮೈಸೂರಾಗಿಯೇ ಉಳಿಯಬೇಕೆಂದು ಹೇಳುವವರು ಕೂಡ ಈ ಶಿಫಾರಸನ್ನು ಸಂತೋಷದಿಂದ ಒಪ್ಪಿಕೊಳ್ಳಬೇಕಾಗಿದೆ.

ಈಗ ಶ್ರೀ ಮುಲ್ಕಾ ಗೋವಿಂದರೆಡ್ಡಿ ಮತ್ತು ಇತರರಿಗೆ ಉತ್ತರ ಹೇಳುತ್ತೇನೆ. ಟಿಪ್ಪುಸುಲ್ತಾನ್ ಕಾಲದಲ್ಲಿ ಏನು ಮೈಸೂರು ದೇಶವಿತ್ತೋ ಅದು ಬರೀ ಕನ್ನಡ ದೇಶವಾಗಿರಲಿಲ್ಲ. ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು, ಹೊಸೂರು ಇವೆಲ್ಲಾ ಸೇರಿದ್ದವು; ಅಲ್ಲಿ ಆಂಧ್ರರು ಇದ್ದರು. ಕೊಯಮುತ್ತೂರು ಕೊಚ್ಚಿನ್ ವರೆಗೂ ಮೈಸೂರು ದೇಶದ ಆಡಳಿತ ಹೋಗಿತ್ತು; ಅಲ್ಲಿ ತಮಿಳರು ಇದ್ದರು. ಮಲಬಾರಿನ ಕೆಲವು ಭಾಗವು ಸೇರಿತ್ತು ; ಅಲ್ಲಿ ಕೇರಳದವರು ಇದ್ದರು. ಕೇರಳದವರ, ತಮಿಳರ ದೇಶವನ್ನು S.R.C. ಯವರು ಸೇರಿಸುತ್ತಾ ಇಲ್ಲ. ಆದರೆ, ಮೈಸೂರು ಸಂಸ್ಥಾನದಲ್ಲಿ 1799ರ ಹಿಂದೆ ಇದ್ದವರಲ್ಲಿ ಪ್ರಬಲರಾಗಿದ್ದ ಜನರೆಂದರೆ, ಈಗ ತೆಲುಗು ಮಾತನಾಡತಕ್ಕವರು ಮತ್ತು ಕನ್ನಡ ಮಾತನಾಡತಕ್ಕವರು. ನಾನು ಈಗಲೂ ಕೂಡ ಪ್ರಾರ್ಥನೆ ಮಾಡಿಕೊಳ್ಳುವುದು, ಈಗ ಇರತಕ್ಕ ತೆಲುಗು ಮಾತನಾಡತಕ್ಕವರನ್ನು ಮತ್ತು ಕನ್ನಡ ಮಾತನಾಡತಕ್ಕವರನ್ನು ಛಿದ್ರಿಸಕೂಡದು ಎಂದು. ಇದು ನನ್ನ ಸತತವಾದ ವಾದ. ನಾನು ಹಿಂದೆ ಬಜೆಟ್ ಭಾಷಣದಲ್ಲಿ ಮತ್ತು ಇತರ ಅನೇಕ ಭಾಷಣಗಳಲ್ಲಿ ಪ್ರಾಂತಗಳನ್ನು ಪೂರ್ತಿ ಭಾಷೆಯ ಆಧಾರದ ಮೇಲೆಯೇ ರಚನೆ ಮಾಡಬೇಡಿ ಎಂದು ಹೇಳಿದ್ದೇನೆ. ಹಾಗೆ ಪೂರ್ತಿ ಭಾಷೆಯ ಆಧಾರದ ಮೇಲೆ ಪ್ರಾಂತಗಳು ರಚನೆಯಾದರೆ, ಮೈಸೂರು ದೇಶ ಒಡೆದು ಹೋಗುವ ಪ್ರಮೇಯ ಬರುತ್ತದೆಂದು ಹೇಳಿದ್ದೇನೆ. ಮೈಸೂರು ಮೈಸೂರಾಗಿಯೇ ಇರಲಿ ಎಂಬ ಅಭಿಮಾನ ಇದ್ದರೆ, ಕೋಲಾರ, ತುಮಕೂರು ಮತ್ತು ಚಿತ್ರದುರ್ಗದಲ್ಲಿ ತೆಲುಗು ಮಾತನಾಡತಕ್ಕ ಜನರು ನಮ್ಮ ಸ್ನೇಹಿತರು, ನಮ್ಮ ಸಹೋದರರು, ಅವರನ್ನು ಬಿಟ್ಟುಕೊಡಬಾರದೆಂಬ ಆತ್ಮೀಯ ಭಾವನೆ ನಮ್ಮಲ್ಲಿರಬೇಕು. ಈ ರೀತಿಯೇ ಇದೆ ಎಂದು ನನ್ನ ನಂಬಿಕೆ ಮತ್ತು ನನ್ನ ಪ್ರಾರ್ಥನೆ. ಈ ಸ್ನೇಹಕ್ಕೆ, ಈ ಬಾಂಧವ್ಯಕ್ಕೆ ಏನಾದರೂ ಧಕ್ಕೆ ಬಂದರೆ, ಆ ಧಕ್ಕೆಗೆ ನಾವೆಲ್ಲರೂ ಕೂಡ ಪ್ರಾಣ ತೆತ್ತು ಅವರನ್ನು ಉಳಿಸಬೇಕು ಎಂದು ನನ್ನ ಮನವಿ. ಆದ್ದರಿಂದ ನಾನು ಪ್ರಾರ್ಥನೆ ಮಾಡಿಕೊಳ್ಳುವುದು, ಹೊಸರಾಜ್ಯ ಏನು ಪ್ರಾರಂಭವಾಗುವುದೋ ಅದನ್ನು ಕನ್ನಡನಾಡು, ಕರ್ಣಾಟಕ ಎಂದು ಹೇಳಿ ಅನೇಕ ಘೋಷಣೆಗಳನ್ನು ಮಾಡಿ ತೆಲುಗರ ಮನಸ್ಸನ್ನು ನೋಯಿಸಬಾರದು, ಎಂದು ಘಂಟಾಘೋಷವಾಗಿ ಬಳ್ಳಾರಿಯಲ್ಲಿ ಹೇಳಿದ್ದೇನೆ. ಕರ್ಣಾಟಕವಾಗಬೇಕು ಎಂದು ಕರ್ಣಾಟಕದ ಜನರು ಕೂಗಬೇಡಿ ಎಂದು ಹೇಳಿದ್ದನ್ನು ನೋಡಿ ಅವರಿಗೆ ಆಶ್ಚರ್ಯವಾಗಿರಬಹುದು. ಉತ್ತರ ಕರ್ಣಾಟಕದವರು ಇದನ್ನು ತಪ್ಪಾಗಿ ತಿಳಿದುಕೊಂಡರೂ ತಿಳಿದುಕೊಂಡಿರಬಹುದು. ಇಂಡಿಯಾ ದೇಶದಲ್ಲಿ ನಾವೆಲ್ಲಾ ಭಾರತೀಯ ಪ್ರಜೆಗಳಾಗಿರುವುದರಿಂದ ಭಾಷೆಯ ಅಭಿಮಾನದಿಂದ ವ್ಯಾಜ್ಯ ಮಾಡುವುದು ದೇಶದ ಹಿತದೃಷ್ಟಿ ಮತ್ತು ಒಗ್ಗಟ್ಟಿಗೆ ಅನುಗುಣವಾಗಿಲ್ಲ. ಆದ್ದರಿಂದ ಆ ರೀತಿ ಯಾವ ಮಾತನ್ನೂ ಆಡಬಾರದು, ಯಾವ ಕಾರ್ಯಕ್ರಮವನ್ನೂ ನಡೆಸಬಾರದು. ಬೇರೆ ಭಾಷೆ ಆಡತಕ್ಕಂತಹವರ ಮನಸ್ಸು ನೋಯುತ್ತದೆ, ಅವರಿಗೆ ಅಪಮಾನವಾಗುತ್ತದೆ, ಅವರ ಅಭಿಮಾನಕ್ಕೆ ಲೋಪ ಬರುತ್ತದೆ ಎಂದು ಕಂಡುಬಂದರೆ, ಅಂತಹ ಕೆಲಸ ಮಾಡಬಾರದು. ಆದ್ದರಿಂದ ತಮ್ಮ ಮುಂದೆ ಒಂದು ಉಚಿತವಾದ ಸಲಹೆಯನ್ನು ಇಡುತ್ತೇನೆ. ಕರ್ಣಾಟಕ ಪ್ರಾಂತ ಎಂದು ಹೇಳಿ ಕರೆಯುವುದು ಬೇಡ. ನೀವೂ ನಾವೂ ಎಲ್ಲರೂ ಸೇರಿ, ಮೈಸೂರನ್ನು ಬೇಕಾದರೆ "ಆಂಧ್ರಕರ್ಣಾಟಕ ಸಾಮ್ರಾಜ್ಯ" ಎಂದು ಕರೆಯೋಣ. ನನಗೆ ಹೊಸಪೇಟೆಯಲ್ಲಿ ಒಂದು ಬಿನ್ನವತ್ತಳೆಯನ್ನು ಕೊಟ್ಟಾಗ ವಿಜಯನಗರವನ್ನು ಕಟ್ಟಿದವರು ಕನ್ನಡಿಗರೆಂದು ಹೇಳಿದರು. ನಾನು ಆ ಅಡ್ರೆಸ್ಸಿಗೆ ಉತ್ತರ ಕೊಡು

ವಾಗ "ಈ ಅಭಿಮಾನ ಬೇಡ, ವಿಜಯ ನಗರದಲ್ಲಿ ರಾಜ್ಯವಾಳಿದ ಅರಸರಿಗೆ ಕನ್ನಡಿಗರು, ತೆಲುಗರು, ತಮಿಳರು, ತುಳುವರು ಎಂಬ ಭೇದವಿರಲಿಲ್ಲ. ಆಗ ರಾಜ್ಯಕಟ್ಟಿರುವುದು ಯಾವುದೋ ಒಂದು ಮಹತ್ತರ ಉದ್ದೇಶಕ್ಕಾಗಿ. ಅಳಿದು ಹೋಗುತ್ತಿರುವ ಹಿಂದೂ ಧರ್ಮವನ್ನು ಕಾಪಾಡಿಕೊಂಡು ಬರುವ ಉದ್ದೇಶಕ್ಕಾಗಿ, ಕನ್ನಡಿಗರೂ, ತೆಲುಗರೂ, ತಮಿಳರೂ, ಈ ದೇಶವನ್ನು ಕಟ್ಟಿದರು. ಇದಕ್ಕೆ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ, ಷೇಕ್ಸ್‌ಪಿಯರ್ ಎಂಬ ಕವಿಯ ವಿಚಾರವಾಗಿ ಬ್ರಾಹ್ಮಣರು ಆತನು ಶೇಷಪ್ಪ ಅಯ್ಯರ್ ಎಂಬುದಾಗಿಯೂ, ಮುಸ್ಲಿಮರು ಷೇಕ್ ಪೀರ್ ಎಂಬುದಾಗಿಯೂ ಹೇಳಿಕೊಂಡ ಹಾಗಾಯಿತು. ಹೀಗೆಯೇ ವಿಜಯನಗರದ ಸಾಮ್ರಾಜ್ಯವನ್ನು ಕನ್ನಡಿಗರು ಕಟ್ಟಿದ್ದು ಅಥವಾ ತೆಲುಗರು ಕಟ್ಟಿದ್ದು ಎಂಬುದಾಗಿ ವ್ಯಾಜ್ಯಮಾಡಿಕೊಂಡರೆ ಅದು ಹಾಸ್ಯಾಸ್ಪದವಾಗುತ್ತದೆ" ಎಂದು ಹೇಳಿದೆ. ಈ ದಿವಸ ಮೈಸೂರಿನಲ್ಲಿ ತೆಲುಗರು ಲಕ್ಷಾಂತರ ಸಂಖ್ಯೆಯಲ್ಲಿದ್ದಾರೆ. ಅವರಿಗೂ ಕೂಡ ಅವರ ಅಭಿಮಾನಕ್ಕೆ ಯಾವ ಕುಂದೂ ಬರುವುದಿಲ್ಲವೆಂಬ ಭಾವನೆ ಉಂಟುಮಾಡುವುದು ನಮ್ಮ ಕರ್ತವ್ಯ. ತೆಲುಗು ಮಾತನಾಡತಕ್ಕವರು ಈ ದೇಶದಲ್ಲಿದ್ದರೆ ಅವರ ಹಕ್ಕುಬಾಧ್ಯತೆಗಳು ಸರಿಯಾಗಿ ಕಾಪಾಡಲ್ಪಡುವುದಿಲ್ಲವೆಂಬ ಶಂಕೆ ಉಂಟಾಗುವ ಹಾಗೆ ನಾವು ಯಾರೂ ನಡೆದುಕೊಳ್ಳಬಾರದು. ಕಾಂಪೊಸಿಟ್ ಸ್ಟೇಟ್ಸ್ ಎಂದು ಏನು ಹೇಳುತ್ತೇವೋ ಅಂತಹ ಸಮ್ಮಿಶ್ರ ಸಂಪ್ರದಾಯವನ್ನು ಉಳಿಸಿಕೊಂಡು ಬಂದರೆ ಎಲ್ಲರಿಗೂ ಕ್ಷೇಮ, ಎಲ್ಲರಿಗೂ ಒಳ್ಳೆಯದು. ಆದುದರಿಂದ ಹೊಸದಾಗಿ ರಚನೆಯಾಗುವ ಪ್ರಾಂತವನ್ನು ನಾವೆಲ್ಲರೂ ಒಮ್ಮನಸ್ಸಿನಿಂದ, ಒಗ್ಗಟ್ಟಿನಿಂದ ಮೈಸೂರೆಂತಲೇ ಕರೆಯೋಣ. ಆ ರೀತಿ ಮಾಡಿದರೆ ನನಗಾದರೂ ಅನ್ನಿಸುತ್ತದೆ—ಮೈಸೂರು ಮೈಸೂರಾಗಿಯೇ ಉಳಿಯಬೇಕು ಎನ್ನುವವರ ಮನಸ್ಸಿಗೆ ಕಿಂಚಿತ್ತಾದರೂ ಆಪ್ಯಾಯಮಾನವಾಗುತ್ತದೆಂದು. ಹೆಚ್ಚಿಗೆ ತೆಲುಗು ಮಾತನಾಡತಕ್ಕವರು ಬಳ್ಳಾರಿಯನ್ನೂ ಸೇರಿ ಮೂರು ಜಿಲ್ಲೆಗಳಲ್ಲಿದ್ದಾರೆ. ಕರ್ಣಾಟಕವಲ್ಲ, ಮೈಸೂರು ಎನ್ನುವುದರಿಂದ ಒಂದು ನಂಬಿಕೆ ಅವರ ಮನಸ್ಸಿನಲ್ಲಿ ಉಂಟಾಗುತ್ತದೆ. ಮೈಸೂರು ಉಳಿಯಬೇಕು ಎನ್ನುವುದು ಸಮ್ಮಿಶ್ರ ಸಂಪ್ರದಾಯ ಉಳಿಸುವುದಕ್ಕೋಸ್ಕರ. ಇದನ್ನು ನಾನು ಸಾಮಾನ್ಯ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಇಂಡಿಯಾ ದೇಶದಲ್ಲಿ ಬೇಕಾದುದು ಎಲ್ಲಕ್ಕಿಂತಲೂ ಹೆಚ್ಚಿಗೆ ಒಗ್ಗಟ್ಟು, ನ್ಯಾಷನಲ್ ಯೂನಿಟಿ. ಭಾಷಾವಾರು ಪ್ರಾಂತಗಳಾದರೆ, ರಾಷ್ಟ್ರದ ಐಕ್ಯತೆಗೆ, ಎಂದರೆ ನ್ಯಾಷನಲ್ ಯೂನಿಟಿಗೆ ಧಕ್ಕೆ ಬರುತ್ತದೆ ಎಂದು ಅನೇಕರ ಮನಸ್ಸಿನಲ್ಲಿ ಅನುಮಾನವಿದೆ. ಯಾವ ಹೊಸ ಸಂಸ್ಥಾನಗಳನ್ನು ರಚಿಸುತ್ತೇವೋ ಅವು ಸಂಯುಕ್ತ ಸಮ್ಮಿಶ್ರ ಸಂಪ್ರದಾಯದ ಸಂಸ್ಥಾನಗಳಾಗಿ, ಇಂಡಿಯಾ ದೇಶದ ಒಗ್ಗಟ್ಟನ್ನು ಕಾಪಾಡುವ ಉದ್ಯಮದಲ್ಲಿ ಮೈಸೂರು ಸಂಸ್ಥಾನ ಪ್ರಥಮ ಪಂಕ್ತಿಯಲ್ಲಿ ಸೇರಿದೆ ಎಂಬ ಖ್ಯಾತಿಯನ್ನು ಪಡೆಯಲಿ.

Mr. SPEAKER.—The House will rise for lunch and meet at 3-30 P.M.

The House rose for Lunch at Three of the Clock and met again at Thirty Minutes past Three of the Clock.

[MR. SPEAKER in the Chair.]

ಶ್ರೀ ಕೆ. ಹನುಮಂತಯ್ಯ.—ಸ್ವಾಮಿ, ಮೈಸೂರು ಸಂಸ್ಥಾನದ ಹೆಸರು ಸುಮಾರು ಆರುನೂರು ಏಳುನೂರು ವರ್ಷಗಳಿಂದಿವೆ; ಆದರೂ ಇದರ ಎಲ್ಲೆ ಕಾಲಕಾಲಕ್ಕೆ ಬದಲಾಯಿಸುತ್ತಿದೆ ಎನ್ನತಕ್ಕ ಚಾರಿತ್ರಕ ವಿಷಯವನ್ನು ಸಭೆಯ ಗಮನಕ್ಕೆ ತರುತ್ತಿದ್ದೆ. ಹೆಸರು ಉಳಿದಮೇಲೆ ವಿಸ್ತೀರ್ಣವೂ ಬದಲಾವಣೆಯಾಗದೆ ಹಾಗೆಯೇ ಉಳಿದಿದೆ ಎಂದು ನಾವು ಅಪಾರ್ಥ ಮಾಡಿಕೊಳ್ಳುತ್ತಿದ್ದೇವೆ. ಆದ ಕಾರಣ ನಮ್ಮ ಮನಸ್ಸಿನಲ್ಲಿ ಶಂಕೆಯನ್ನು ಕಲ್ಪಿಸಿಕೊಳ್ಳಬೇಕಾಗಿಲ್ಲ. ಯಾವ ದೇಹ ಶಂಕೆಪಡುತ್ತದೆಯೋ ಆ ನಮ್ಮ ದೇಹವೇ ಕಾಲಕಾಲಕ್ಕೆ ಬದಲಾವಣೆಯನ್ನು ಹೊಂದುತ್ತದೆ. ಐದು ವರ್ಷದಲ್ಲಿದ್ದ ಹುಡುಗ ಐವತ್ತು ವರ್ಷ ವಯಸ್ಸಿಗೆ ಬಂದ ಮೇಲೆ ಅವನ ದೇಹ ಬೆಳವಣಿಗೆ ಆಗಿಯೇ ಆಗುತ್ತದೆ. ಯಾರೇ ಆದರೂ ಯಾವುದೋ ಒಂದು ವಯಸ್ಸಿನಲ್ಲಿದ್ದ ತೂಕ ಮತ್ತು ಎತ್ತರ ಅಷ್ಟೇ ಉಳಿದುಕೊಳ್ಳಬೇಕೆಂಬ ವಾದವನ್ನು ಮಾಡುವುದಿಲ್ಲ. ಹಾಗೆಯೇ ಮೈಸೂರು ದೇಶ ಎನ್ನುವ ಸಂಸ್ಥೆಗೂ ಕೂಡ ಬೆಳವಣಿಗೆಯುಂಟು. ಮೊದಲೇ ನಾನು ಹೇಳಿದ ಹಾಗೆ, ಹಿಗ್ಗುವುದೂ ಉಂಟು, ತಗ್ಗುವುದೂ ಉಂಟು. ಚಾರಿತ್ರಕ ಘಟನೆಗಳು ಈ ದಿವಸ ಮೈಸೂರು ದೇಶವನ್ನು ಹಿಗ್ಗಿಸುತ್ತಿವೆ. ಈ ಹಿಗ್ಗಿನ ಹಿರಿಮೆಯನ್ನು ನೋಡಿ ನಾವು ಸಂತೋಷಪಡಬೇಕಾದ ಕಾಲ ಇದು. ಮನಸ್ಸಿನಲ್ಲಿ ಕಿರಿಕಿರಿಯನ್ನುಂಟುಮಾಡಿಕೊಳ್ಳುವ ಕಾಲವಿದಲ್ಲ. ಸೃಷ್ಟಿ ನಿಯಮ ಯಾವ ರೀತಿ ದೇಹಕ್ಕೆ ಅನ್ವಯಿಸುತ್ತದೆಯೋ ಅದೇ ರೀತಿ ದೇಶಕ್ಕೂ ಅನ್ವಯಿಸುತ್ತದೆ. ನಿಷ್ಪಕ್ಷಪಾತ ದೃಷ್ಟಿಯಿಂದ, ಸಹಜವಾದ ದೃಷ್ಟಿಯಿಂದ ನಾವು ಈ ಪ್ರಶ್ನೆಯನ್ನು ಪರಿಶೀಲಿಸಿದರೆ ಒಮ್ಮತ, ಸೌಹಾರ್ದ ಸ್ಥಾಪನೆಯಾಗುವುದರಲ್ಲಿ ಸಂದೇಹವೇ ಇಲ್ಲ.

ಎರಡು ಕರ್ಣಾಟಕವಾಗಬೇಕೆನ್ನುವವರ ಮನಸ್ಸಿನಲ್ಲಿರುವ ಒಂದು ದೊಡ್ಡ ಅನುಮಾನವೇನೆಂಬುದು ನನಗೆ ಗೊತ್ತಿದೆ. ಅದು ನ್ಯಾಯವಾದ ಅನುಮಾನ. ಅವರ ಮುಖ್ಯ ವಾದ, ಮೈಸೂರುದೇಶ ಈ ರೀತಿ ವಿಶಾಲವಾದರೆ ಆಡಳಿತದ ಬಿಗಿ ಇಷ್ಟಿರುವುದಿಲ್ಲ, ಕಡಮೆಯಾಗುತ್ತದೆ ಎಂಬುದು. ಎರಡನೆಯದು ಸರ್ಕಾರದವರು ಯಾವ ಸೌಲಭ್ಯಗಳನ್ನು ಮೈಸೂರು ದೇಶದಲ್ಲಿ ಸ್ಥಾಪಿಸಿದ್ದಾರೋ ಅವುಗಳಿಗೆ ನ್ಯೂನತೆ ಬರಬಹುದೆಂಬುದು. ಆಡಳಿತ ದಕ್ಷತೆಯ ವಿಚಾರದಲ್ಲಿ ನನ್ನ ಅಭಿಪ್ರಾಯವನ್ನು ಮೊದಲೇ ಹೇಳಿದ್ದೇನೆ. 36 ಕೋಟಿ ಜನರಿರುವ ಈ ಇಂಡಿಯನ್ ಯೂನಿಯನ್‌ನಲ್ಲಿ ಒಂದೊಂದು ಕೋಟಿ ಜನಕ್ಕೆ ಒಂದೊಂದು ಸಂಸ್ಥಾನವನ್ನು ಏರ್ಪಾಡು ಮಾಡುವುದಕ್ಕಾಗುವುದಿಲ್ಲ. ನಾನಾ ಕಾರಣಗಳಿಂದ ಇದು ಸಾಧ್ಯವಿಲ್ಲ. ಉತ್ತರ ಇಂಡಿಯಾ ಪ್ರದೇಶದಲ್ಲಿರತಕ್ಕ ರಾಜ್ಯಗಳನ್ನು ಒಂದೊಂದು ಕೋಟಿಗೆ ಒಂದೊಂದು ಸಂಸ್ಥಾನದಂತೆ ಮಾಡಿದರೆ, ಇಂಡೊ-ಗ್ಯಾಂಜೆಟಿಕ್ ವ್ಯಾಲಿಯಲ್ಲಿ ಜನಸಂಖ್ಯೆ ಬಹಳ ಹೆಚ್ಚಾಗಿರುವುದರಿಂದ ಮೂರು ಡಿಸ್ಟ್ರಿಕ್ಟುಗಳಿಗೆ ಒಂದೊಂದು ಸಂಸ್ಥಾನವನ್ನು ಮಾಡಬೇಕಾಗುತ್ತದೆ. ಮಧ್ಯಪ್ರದೇಶದಲ್ಲಿ ವಿಶಾಲವಾದ ಒಂದು ದೊಡ್ಡ ರಾಜ್ಯವನ್ನು ಮಾಡಬೇಕಾಗುತ್ತದೆ. ಆದುದರಿಂದ ದೇಶ ಪರಿಸ್ಥಿತಿಗಳಿಗನುಗುಣವಾಗಿ ನಾನು ಎರಡು ಕೋಟಿ ಜನರಿಗೊಂದು ರಾಜ್ಯವೆಂದು ಹೇಳಿದೆ. ಆ ನನ್ನ ದೃಷ್ಟಿಯಲ್ಲಾದರೂ ಕೂಡ ಹೀಗೆ ಮಾಡಿದರೆ, ಇದು ಆಡಳಿತದ ಬಿಗಿಗೆ ಅನಾನುಕೂಲವಾಗತಕ್ಕ ದೊಡ್ಡ ಪ್ರದೇಶವೂ

(ಶ್ರೀ ಕೆ. ಹನುಮಂತಯ್ಯ)

ಆಗುವುದಿಲ್ಲ. ಪ್ರಜಾ ಪ್ರಭುತ್ವದ ಸಲಕರಣೆಗಳಿಗೆ ಹಣವನ್ನೊದಗಿಸಬೇಕಾದ ಪ್ರಮೇಯವಿದ್ದೇ ಇದೆ. ವೆಚ್ಚದ ದೃಷ್ಟಿಯಿಂದ ಬಹಳ ಚಿಕ್ಕ ದೇಶಗಳಾದರೆ ವೆಚ್ಚ ಹೊರುವುದಕ್ಕೆ ಕಷ್ಟವಾಗುತ್ತದೆ. ಪ್ರಜಾ ಪ್ರಭುತ್ವ ಸಲಕರಣೆಗಳಿಗೂ ಎಲ್ಲಕ್ಕೂ ಎರಡು ಕೋಟಿ ಜನರಿದ್ದರೆ ಬಹಳ ಒಳ್ಳೆಯದು.

ಮತ್ತೊಂದು ದೃಷ್ಟಿಯಿಂದ ಅನುಭವ ಪೂರ್ವಕ ವಾಗಿ ಹೇಳುತ್ತೇನೆ. ಎಲ್ಲಿಯೇ ಆಗಲಿ, ಪ್ರಜಾ ಪ್ರಭುತ್ವದಲ್ಲಿ ಸರ್ಕಾರಕ್ಕೆ ಸ್ಥಿಮಿತತೆ ಅಥವಾ ಸ್ಟೆಬಿಲಿಟಿ ಇರಬೇಕು. ಅಂತರ್ರಾಷ್ಟ್ರೀಯ ಪ್ರಪಂಚ ದಲ್ಲಿ ಇಂಗ್ಲೆಂಡಿನಲ್ಲಿರತಕ್ಕ ಮಂತ್ರಿಮಂಡಲಕ್ಕೂ ಫ್ರಾನ್ಸಿನಲ್ಲಿರತಕ್ಕ ಮಂತ್ರಿಮಂಡಲಕ್ಕೂ ಹೋಲಿಸಿ ನೋಡಿದರೆ, ಅಲ್ಲಿ ಯಾವ ರೀತಿ ಸ್ಟೆಬಿಲಿಟಿಇದೆ ಎಂಬುದು ಗೊತ್ತಾಗುತ್ತದೆ. ನಮ್ಮ ದೇಶಕ್ಕೆ ಬೇಕಾದದ್ದು ಸ್ಟೇಬಲ್ ಗವರ್ನಮೆಂಟ್. ದಕ್ಷತೆ, ಪ್ರಾಮಾಣಿಕತೆ ಇದ್ದೇ ಇರಬೇಕೆಂಬುದು ನಿರ್ವಿವಾದವಾದ ವಿಷಯ. ಇದರ ಜೊತೆಗೆ ಸ್ಟೇಬಲ್ ಗವರ್ನಮೆಂಟ್ ಕೂಡ ಇರ ಬೇಕು. ಹೀಗೆ ಸ್ಟೇಬಲ್ ಗವರ್ನಮೆಂಟ್ ಆಗಬೇಕಾ ದರೆ ಶಾಸನ ಸಭೆಗಳು ಸ್ವಲ್ಪ ದೊಡ್ಡವಾಗಿರಬೇಕು. ಇಂಗ್ಲೆಂಡಿನಲ್ಲಿ ಹೌಸ್ ಆಫ್ ಕಾಮನ್ಸ್‌ನಲ್ಲಿ 600 ಜನರಿರುವುದರಿಂದ ಅದು ಭೂಮಿ ತೂಕದ ರಥ, ಅರ್ಜುನನ ರಥ ಎಂದು ಹೇಳುತ್ತಾರೆ. ಅದು ಆ ರೀತಿ ನಡೆಯುತ್ತಿದೆ. ಈಗಿನ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ 70–80 ಜನರಿದ್ದಾರೆ, ಮಿಕ್ಕವರು 25 ಜನರೂ ಆಗುವುದಿಲ್ಲ. ಚುನಾವಣೆಯ ಫಲಿತಾಂಶಗಳು ಯಾವಾಗಲೂ ಹೀಗೆಯೇ ಇರುವುದಿಲ್ಲ. ಈಗ 105 ಜನ ಇದ್ದೇವೆ. ಅಕಸ್ಮಾತ್ 50 ಜನರು ಒಂದು ಕಡೆ, 55 ಜನರು ಇನ್ನೊಂದು ಕಡೆ ಆದರೆ, 55 ಜನರು ಮೆಜಾರಿಟಿ ಪಕ್ಷವಾಗಿ ಅದರಲ್ಲಿ ಲೀಡರ್‌ಷಿಪ್ ಆದರೆ, 28 ಜನರು ಒಪ್ಪಿ ಒಬ್ಬನನ್ನು ಲೀಡರ್ ಮಾಡಿದರೆ ಸಾಕು. 28 ಜನರು ಯಾರನ್ನು ಲೀಡರ್ ಎಂದು ಒಪ್ಪುತ್ತಾರೋ ಅತನು 105 ಜನ ರಿಗೂ ಲೀಡರ್ ಆಗಬೇಕು. ಆಗ ದೇಶದ ಹಿತವೇ ಎಲ್ಲಕ್ಕಿಂತ ದೊಡ್ಡಗುರಿ ಎಂದಿಟ್ಟುಕೊಳ್ಳದೇ ಹೋದರೆ ಕಷ್ಟವಾಗುತ್ತದೆ. Party manoeuvring will become such a contagious disease that no Government can be stable and no Government can work without being influenced by external considerations. ಆದುದರಿಂದ ಶಾಸನ ಸಭೆಗಳಲ್ಲಿ ಹೆಚ್ಚು ಸಂಖ್ಯೆ ಸದಸ್ಯ ರಿದ್ದರೆ ಯಾವ ಪಕ್ಷದ ಮಂತ್ರಿಮಂಡಲವೇ ಬಂದರೂ ಸ್ಟೇಬಲ್ ಗವರ್ನಮೆಂಟ್ ಇರುತ್ತದೆ. ಇಲ್ಲದಿದ್ದರೆ ಮಾರ್ಜಿನಲ್ ಓಟ್ಸ್ ಆಗಿ ನಾಲ್ಕು ಜನರು ಇತ್ತಕಡೆ ಇದ್ದವರು ಅತ್ತಕಡೆ ಹೋದರೆ ಆಗ ಆ ಸರ್ಕಾರ ಉರುಳುತ್ತದೆ. ಸಂಸ್ಥಾನದಲ್ಲಿ ಪ್ರಜಾಪ್ರಭುತ್ವ ಉಳಿದು, ಬೆಳೆದು, ಪರಿಣಾಮಕಾರಿಯಾಗಿ ಕೆಲಸಮಾಡ ಬೇಕೆಂಬ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ.

ಈ ಶಾಸನಸಭೆಯ ಸದಸ್ಯತ್ವ 200–250ಕ್ಕೆ ಹೆಚ್ಚಿದರೆ it will have the democratic dignity, the necessary stability and the collective wisdom of a greater number of people. ಪ್ರಜಾಪ್ರಭುತ್ವ ನಡೆಯಬೇಕಾದರೂ, ಈ ದೃಷ್ಟಿಯಿಂದ ದೊಡ್ಡ ಸಭೆಯಿರತಕ್ಕದ್ದು ಉಚಿತ. ಸಣ್ಣ ಸಭೆಯಿದ್ದರೆ ಉತ್ತರೋತ್ತರ ಮಂತ್ರಿ ಮಂಡಲವೇ 3-4 ಜನರ ಕೈಯಲ್ಲಿ ಸಿಕ್ಕಿಕೊಂಡು ಹೋರಾಡಬೇಕಾಗುತ್ತದೆ. ಇದನ್ನು ನಾನು ಹೇಳಿ ದರೆ ಅಪಾರ್ಥವಾದರೂ ಆಗಬಹುದು. ಕಾರಣ, ನನ್ನ ಸ್ಥಾನ ಅಂಥಾದ್ದು. ಆದರೆ, ಏನು ಅಪಾರ್ಥವಾದರೂ, ದೇಶಕ್ಕಾಗಿ, ಅದರ ಉತ್ತರೋ ತ್ತರ ಕಲ್ಯಾಣಕ್ಕಾಗಿ, ಸತ್ಯವಾಗಿ, ನಿರ್ದಾಕ್ಷಿಣ್ಯವಾಗಿ ನಡೆಯಬೇಕು ಎಂದು ಹೇಳುತ್ತಿದ್ದೇನೆ. ಆಡಳಿತದ ಬಿಗಿಯೆನ್ನುವುದು, ಸ್ಟೆಬಿಲಿಟಿ ಯೆನ್ನುವುದು ಇರುವುದೇ ಇಂಥ ದೊಡ್ಡ ಶಾಸನ ಸಭೆಯಿಂದ. A weak Government cannot provide an effective administration. The administrative stability, impartiality and efficiency are guaranteed more by a bigger assembly than by a smaller one.

ಅಲ್ಲದೆ, ಎರಡು ಕೋಟಿ ಜನರಿರತಕ್ಕ 72,000 ಚದರ ಮೈಲಿಗಳ ವಿಸ್ತೀರ್ಣವುಳ್ಳ ಈ ಪ್ರಾಂತವು ಆಡಳಿತ ಸೌಕರ್ಯದ ದೃಷ್ಟಿಯಿಂದಲೂ ಕೂಡ ಒಂದು ಒಳ್ಳೆಯ ಯೂನಿಟ್ ಆಗಿರುತ್ತದೆಂದು ನನ್ನ ಅಭಿಪ್ರಾಯ. ಹಾಗೆ ನೋಡಿದರೆ, 6 ಅಥವಾ 6½ ಕೋಟಿ ಜನರಿರುವ ಉತ್ತರ ಪ್ರದೇಶವಿನ್ನೂ ಬಹಳ ಅನ್‌ವೀಲ್ಡಿ ಎಂದು ಹೇಳಬಹುದು ಅಷ್ಟೇ. It is too unwieldy and ultimately it may harm the Indian unity. That is the fear entertained by many people. As I have already said, that is not the matter on which we can take a decision here, though we are perfectly entitled to make a suggestion, because we are considering the report as a whole.

ಆಡಳಿತದ ಸೌಕರ್ಯದ ವಿಚಾರವೆಂಬುದು ಒಂದು ಪ್ರಾಮುಖ್ಯವಾದ ಪ್ರಶ್ನೆ. ಮೈಸೂರು ದೇಶದಲ್ಲಿ ಈಗಿರುವಷ್ಟು ಶಾಲೆಗಳು, ಆಸ್ಪತ್ರೆಗಳು, ರಸ್ತೆ ಗಳು, ಇತ್ಯಾದಿ, ಇತ್ಯಾದಿ ಸೌಕರ್ಯಗಳು ಮೈಸೂರಿನ ವಿಸ್ತರಣೆಯಿಂದ ಕಡಮೆಯಾಗಬಹುದೆಂಬ ಶಂಕೆ ಯಿದೆ. ಅದೂ ನ್ಯಾಯವಾದ ಶಂಕೆಯೇ. ಫ್ಯಾಕ್ಟ್ ಫೈಂಡಿಂಗ್ ಕಮಿಟಿಯನ್ನು ಸರ್ಕಾರದವರು ನೇಮಿಸಿ ದ್ದಾಗ, ಇದೇ ದೃಷ್ಟಿಯಿಂದ ಆಡಳಿತ ಸೌಕರ್ಯ ಎಷ್ಟರ ಮಟ್ಟಿಗೆ ಕಡಮೆಯಾಗಬಹುದು ಎಂಬುದನ್ನು ತಿಳಿದು ಕೊಳ್ಳುವುದಕ್ಕೇ ಮಾಡಿದ್ದು. ಅವರು ಆಡಳಿತ ಸೌಕರ್ಯದ ದೃಷ್ಟಿಯಿಂದ ಈಗಿರತಕ್ಕ ಮೈಸೂರಿಗೆ ತೊಂದರೆಯಾಗಬಹುದೆಂಬ ಅಂಶವನ್ನು ಸ್ಪಷ್ಟಪಡಿಸಿ ದ್ದಾರೆ. ಅದನ್ನೂ ಒಪ್ಪಿಕೊಳ್ಳಬೇಕಾದ್ದೇ.

ಆದರೆ, ಅಂಕಿ ಅಂಶಗಳಲ್ಲಿ ವ್ಯಾಜ್ಯವಾಡುತ್ತಾ ಹೋದರೆ, ಅದು ವಾದದ ಹಾದಿಯಲ್ಲಿ ಹೋಗಿ ಹೃದಯವನ್ನು ಮುಟ್ಟುವುದಿಲ್ಲ. ನಮಗೆ ತಿಳಿದಿರುವ ಹಾಗೆ ಆಡಳಿತ ಸೌಕರ್ಯವೇನೋ ಕಡಮೆಯಾಗ ಬಹುದು. ಆದರೆ ಆಡಳಿತ ಸೌಕರ್ಯವನ್ನು ಒದಗಿಸ ತಕ್ಕ ಪೂರ್ಣ ಜವಾಬ್ದಾರಿ ಈ ದಿವಸ ನಮ್ಮ ಮೇಲಿಲ್ಲ. ಯಾವತ್ತು 1950ರಲ್ಲಿ ಹಣಕಾಸಿನ ವಿಲೀನೀಕರಣವಾ ಯಿತೋ ಅಂದಿನಿಂದ ಕ್ರಮಕ್ರಮವಾಗಿ ಮೈಸೂರು ಯಾವ ರೀತಿ ಹಿಂದೆ ಸ್ವಾವಲಂಬಿಯಾಗಿತ್ತೋ ಆ ಸ್ವಾವಲಂಬನೆಯನ್ನು ದಿನೇ ದಿನೇ ಕಳೆದುಕೊಳ್ಳುತ್ತಾ ಬಂದಿದೆ. ಆದ್ದರಿಂದ ಮಾನ್ಯ ಸದಸ್ಯರು ಈ ವಾದವನ್ನು ಅದಕ್ಕಿಂತ ಹಿಂದೆ ಹೇಳಿದ್ದರೆ ಅದ ರಲ್ಲಿ ಸಂಪೂರ್ಣ ಸತ್ಯವಿರುತ್ತಿತ್ತು. ಆಗ್ಗೆ ಆದಾಯ ತೆರಿಗೆ ನಮ್ಮಲ್ಲಿತ್ತು; ಎಕ್ಸೈಸ್ ಬಾಬು ನಮ್ಮಲ್ಲಿತ್ತು; ರೈಲ್ವೇ ಬಾಬು ನಮ್ಮಲ್ಲಿತ್ತು; ಚಿನ್ನದ ಮೇಲಣ ಸುಂಕದ ವಿಷಯದಲ್ಲಿ ಪೂರ್ಣ ಅಧಿಕಾರ ನಮ

ಗಿತ್ತು, ಹಾಗೆ ಎಲ್ಲಾ ಅಧಿಕಾರಗಳೂ ನಮಗಿದ್ದುದರಿಂದ ಈ ಯಾವುದೊಂದು ಬಾಬಿನಲ್ಲಿಯೇ ಆಗಲಿ ಸ್ವಲ್ಪ ದರವನ್ನು ಬದಲಾಯಿಸಿದ್ದರೆ ಒಂದೆರಡು ಕೋಟಿ ರೂಪಾಯಿಗಳನ್ನು ಸಂಪಾದಿಸುವ ಶಕ್ತಿಯಿತ್ತು. ಈಚೆಗೆ ಆರ್ಥಿಕ ವಿಲೀನೀಕರಣವಾದ ಮೇಲೆ all elastic sources of Revenue have been handed over to the Centre unceremoniously as the Leader of the Opposition says, and ceremoniously as we Congress people say. ಅಂತೂ ಅದು ಆಗಿಹೋಯಿತು. ಈ ಬಲಿದಾನವನ್ನು ಮೈಸೂರು ಸಂಸ್ಥಾನ ಮಾಡಿದ್ದು ನ್ಯಾಯವಾಗಿಯೂ ಇದೆಯೆಂದೇ ನಾನು ವಾದಿಸುತ್ತೇನೆ. ಏಕೆಂದರೆ ಇಂಡಿಯಾ ದೇಶದ ಒಗ್ಗಟ್ಟು ಮತ್ತು ಇಂಡಿಯಾ ದೇಶದ ಒಟ್ಟು ಪುರೋಭಿವೃದ್ಧಿಯ ದೃಷ್ಟಿಯಿಂದ ಫೈನಾನ್ಷಿಯಲ್ ಇಂಟಿಗ್ರೇಷನ್ ಮತ್ತು ಪೊಲಿಟಿಕಲ್ ಇಂಟಿಗ್ರೇಷನ್ ಮಾಡಿದ್ದು ಒಳ್ಳೆಯದೆ. ಅದರಂತೆ ಆ ಬಾಬುಗಳನ್ನು ಕೊಟ್ಟಿದ್ದಾಗಿದೆ.

ಈಗ ಏನಾಗಿದೆ? ನಮ್ಮ ಸಂಸ್ಥಾನದ ಆದಾಯ ಹೆಚ್ಚಿಸಿಕೊಳ್ಳುವ ಅವಕಾಶವಿಲ್ಲ. ಎಲ್ಲಾ ಸಂಸ್ಥಾನಗಳ ಸ್ಥಿತಿಯೂ ಕೂಡ ಇದೇ ಆಗಿದೆ. ನಮ್ಮೊಬ್ಬರದೇ ಹೀಗಿಲ್ಲ. ಆದರೆ, ಕೇಂದ್ರ ಸರ್ಕಾರದ ಆದಾಯ ದಿನ ದಿನಕ್ಕೂ ಹೆಚ್ಚುತ್ತಿದೆ. ಮಿಕ್ಕ ಎಲ್ಲಾ ಸರ್ಕಾರಗಳೂ ಅಷ್ಟು ಕೊಡಿ, ಅಷ್ಟು ಕೊಡಿ ಎಂದು ಕೇಂದ್ರದವರನ್ನು ಕೇಳಿ ತೆಗೆದುಕೊಳ್ಳುವ ಪರಿಸ್ಥಿತಿ ಬಂದಿದೆ. ಈ ಪರಿಸ್ಥಿತಿ ನಮ್ಮ ಇಂಡಿಯಾ ದೇಶದಲ್ಲಿರತಕ್ಕ ಫೆಡರಲ್ ಸ್ಟ್ರಕ್ಚರಿಗೆ ಮಾತ್ರ ಅನ್ವಯಿಸುವುದಿಲ್ಲ. ಅಮೆರಿಕಾದಲ್ಲಿಯೂ ಕೂಡ federal Government has become more powerful and has more resources. ಅವರು ew-deal ನಂತಹ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಬೇಕಾದರೆ, it is not the State Governments that do it; it is the federal Government. ಆದ್ದರಿಂದ ಫೆಡರಲ್ ಸರ್ಕಾರದಲ್ಲಿ ಸತ್ಸಂಪ್ರದಾಯವಾಗಿ ಅಧಿಕಾರ ಮತ್ತು ಹಣ ಕೇಂದ್ರೀಕೃತವಾಗಬೇಕು. ಹಾಗೆಯೇ ಇಂಡಿಯಾ ದೇಶದಲ್ಲೂ ಆಗಿದೆ. ಆದ್ದರಿಂದ ಈ ದಿವಸ ಇಂಡಿಯಾ ದೇಶದಲ್ಲಿ ಯಾವ ಸಂಸ್ಥಾನದವರಾಗಲಿ ಸರ್ಕಾರದಿಂದ ಒದಗಿಸತಕ್ಕ ಸೌಲಭ್ಯಗಳು ಹೆಚ್ಚಾಗಿ ಸಿಕ್ಕಬೇಕೆಂದು ಅಪೇಕ್ಷೆಪಟ್ಟರೆ, ಅದೇನಿದ್ದರೂ ಇಂಡಿಯಾ ಸರ್ಕಾರದಿಂದ ಅವರು ಹೆಚ್ಚಿಗೆ ವರಮಾನವನ್ನು ಬರುವ ಹಾಗೆ ಮಾಡಿಕೊಳ್ಳುವುದರಿಂದ ಮಾತ್ರ ಸಾಧ್ಯ. ಇಂದು ನಮ್ಮ ಮೈಸೂರಿನ ಪರಿಸ್ಥಿತಿಯನ್ನು ನೋಡಿದರೆ, ಇಲ್ಲಿ ಎರಡು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಡಿಫಿಸಿಟ್ ಬರುತ್ತಿದೆ. ಇದು ಏಕೆ ಎಂದರೆ ನಾವು ಜನಗಳ ಅಭಿವೃದ್ಧಿಯನ್ನು ಆದಷ್ಟು ಸಾಧಿಸಬೇಕೆಂಬ ಆಸೆಯಿಂದ ಸೌಲಭ್ಯಗಳನ್ನು ಕೊಡತಕ್ಕ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದೇವೆ. ಸ್ಕೂಲುಗಳು ಹೆಚ್ಚಿವೆ; ಆಸ್ಪತ್ರೆಗಳು ಹೆಚ್ಚಿವೆ; ಪಶುವೈದ್ಯಶಾಲೆಗಳಂತೂ, they have exceeded the target set by the Five Year Plan not at the end of five years but at the end of three years alone. ಇವುಗಳಲ್ಲಿ ಕೆಲವು ಮಟ್ಟಿನ ಕೆಲಸಕಾರ್ಯಗಳನ್ನು ಹಿಂದಿನ ಮಂತ್ರಿ ಮಂಡಳದವರೇ ಮಾಡಿದ್ದರು. ಅವನ್ನು ನಾವು ಮುಂದುವರಿಸುತ್ತಿದ್ದೇವೆ. ಇವುಗಳಿಂದಾಗಿ ನಮ್ಮ ಆವೃತ್ತ ವೆಚ್ಚ ಜಾಸ್ತಿಯಾಗಿದೆ. ಆದರೆ, ಅದಕ್ಕನುಗುಣವಾಗಿ ನಮ್ಮ ಆದಾಯವೇನೂ ಜಾಸ್ತಿಯಾಗಿಲ್ಲ. ಹೀಗಾಗಿ ನಮ್ಮ ಡಿಫಿಸಿಟ್ ಜಾಸ್ತಿಯಾಗಿದೆ. ಈ ರೀತಿಯಾಗಿರತಕ್ಕ ನಮ್ಮ ಆರ್ಥಿಕಪರಿಸ್ಥಿತಿಯನ್ನು ನಾವು ನಮ್ಮ ರಾಜ್ಯಾಂಗಪ್ರಕಾರ ಪರಿಹರಿಸಬೇಕಾದರೆ, ಐದು ವರ್ಷಕ್ಕೊಂದುಸಾರಿ Finance Commission ನೇಮಿಸುತ್ತಾರೆ. ನಮ್ಮ ಕಷ್ಟವೇನೆಂಬುದನ್ನು ಅವರ ಮುಂದೆ ಹೇಳಬೇಕು; ನಮ್ಮ ಆರ್ಥಿಕ ದುಸ್ಥಿತಿಯನ್ನು ವಿವರಿಸಬೇಕು. ಅದರ ಮೇಲೆ ಫೈನಾನ್ಷಿಯಲ್ ಇಂಟಿಗ್ರೇಷನ್ನಿನ ಸೂತ್ರದ ಪ್ರಕಾರ ಅವರು ಎಲ್ಲಾ ಸಂಸ್ಥಾನಗಳಿಗೂ ಹಣವನ್ನು ರೀ-ಅಲೋಕೇಟ್ ಮಾಡುತ್ತಾರೆ. ತಮಗೆಲ್ಲಾ ಗೊತ್ತಿರುವಂತೆ, the first Finance Commission appointed by the Government of India under the Constitution gave more allotment to the State under the head "Income-tax and Excise." ಅಲ್ಲದೆ ಈಚೆಗೆ ತಾನೆ ಕೇಂದ್ರದ ಆರ್ಥಿಕ ಮಂತ್ರಿಗಳು ಈ ಹಣವನ್ನು ಇನ್ನೂ ಹೆಚ್ಚಿಸುತ್ತೇವೆ ಎಂದು ತಿಳಿಸಿದ್ದಾರೆ. ಏಕೆಂದರೆ, the Central Government does not directly bring amenities to the people. It is not directly in administrative touch with the people. It is only through the agencies of the State Governments that it can work. Therefore, it is bound to throw in more resources to the extent possible. ಆದ್ದರಿಂದ ಮೈಸೂರು ದೇಶದ ಸ್ವಾವಲಂಬನೆಯೆಂಬುದು ಈ ರೀತಿಯಾಗಿ ಬಹಳ ಕಡಮೆಯಾಗಿರುವುದರಿಂದ ಎಲ್ಲಾ ಸೌಕರ್ಯಗಳನ್ನೂ ನಾವೇ ಒದಗಿಸುತ್ತೇವೆ, ಮೈಸೂರು ದೇಶದ ಮಟ್ಟಿಗೆ ಇದೇ ರೀತಿಯಿರುತ್ತದೆ ಎಂದು ಹೇಳಲಿಕ್ಕಾಗುವುದಿಲ್ಲ. ಒಂದು ವೇಳೆ ಕೇಂದ್ರದವರು ಕೊಡುತ್ತಿರುವ ಸಹಾಯವನ್ನು ಈ ದಿವಸ ನಿಲ್ಲಿಸಿಬಿಟ್ಟರೆ ನಾವು ಈಗಿರುವ ಸ್ಕೂಲುಗಳಲ್ಲಿ ಅರ್ಧವನ್ನೂ, ಈಗಿರತಕ್ಕ ಆಸ್ಪತ್ರೆಗಳಲ್ಲಿ ಅರ್ಧವನ್ನೂ ಮುಚ್ಚಿಬಿಡಬೇಕಾಗಿ ಬರುತ್ತದೆ. ನಮ್ಮ 1950ನೆ ಹಣಕಾಸಿನ ವಿಲೀನೀಕರಣದ ಒಪ್ಪಂದದ ಪ್ರಕಾರ ಅವರು ಕೊಡುತ್ತಿದ್ದ 345 ಲಕ್ಷ ಹಣ ವರ್ಷ ವರ್ಷಕ್ಕೂ ಕಡಮೆಯಾಗುತ್ತಾ ಬಂದು ಈಗ್ಗೆ ಎರಡು ವರ್ಷಗಳ ಹಿಂದೆಯೇ ನಿಂತುಬಿಡಬೇಕಾಗುತ್ತಿತ್ತು. But the Central Government has generously come to the rescue of Mysore Government and it is continuing its contribution irrespective of the agreement arrived at with the Central Government.

ಆದ್ದರಿಂದ ಈಗ ನಾವು ಜನಗಳಿಗೆ ಸೌಕರ್ಯವನ್ನು ಒದಗಿಸಬೇಕೆಂಬ ಮನಸ್ಸಿದ್ದರೆ, ಆ ಆಸೆಯನ್ನು ಪೂರ್ತಿ ಮಾಡಿಕೊಳ್ಳಬೇಕಾದರೆ, ನಮ್ಮ ಮೈಸೂರು ದೇಶವನ್ನು ಈಗಿರುವ ಹಾಗೆಯೇ ಉಳಿಸಿದ್ದರೂ ಆಗುವುದಿಲ್ಲ. ನಾವು ಫೈನಾನ್ಸ್ ಕಮಿಷನ್ನಿನ ಮೂಲಕ ಕೇಂದ್ರ ಸರ್ಕಾರದಿಂದ ಹಣವನ್ನು ಹೆಚ್ಚಾಗಿ ಒದಗಿಸಿಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ. ಆದ್ದರಿಂದ ಜನಗಳಿಗೆ ಹೆಚ್ಚು ಹೆಚ್ಚು ಸೌಕರ್ಯವನ್ನು ಯಥೇಚ್ಛವಾಗಿ ಒದಗಿಸಬೇಕೆಂಬುದೇ ನಮ್ಮೆಲ್ಲರ ಅಭಿಪ್ರಾಯವಾಗಿರುವಾಗ, ಯಾವ ಮಾರ್ಗದಲ್ಲಿ ಆ ಆಶಯವನ್ನು ಪೂರ್ತಿ ಮಾಡಿಕೊಳ್ಳಬಹುದೆಂಬುದನ್ನು ತಾವೇ ಯೋಚನೆ ಮಾಡಬಹುದು. ನಮ್ಮ ಈಗಿನ ಪರಿಸ್ಥಿತಿಯಲ್ಲಿ ಒಂದು ಕಾಸು ಹೆಚ್ಚಿಗೆ ತೆರಿಗೆ ಹಾಕಿ

(ಶ್ರೀ ಕೆ. ಹನುಮಂತಯ್ಯ)

ದರೂ ವಿರೋಧ ಪಕ್ಷದ ಮುಂದಾಳುಗಳೂ ನಮ್ಮ ಕಾಂಗ್ರೆಸ್ ಮುಂದಾಳುಗಳೂ ಎಲ್ಲರೂ ವ್ಯತ್ಯಾಸವಿಲ್ಲದೆ ವಿರೋಧಿಸುತ್ತೀರಿ. ನಮ್ಮ ಸ್ಥಿತಿ ಹೇಗಿದೆಯೆಂಬುದು ತಮಗೆಲ್ಲಾ ಗೊತ್ತಿದೆ. Mysore is not in a position to finance the Second Five-Year Plan fully. ನೀವೇ ಲೆಕ್ಕ ಹಾಕಬಹುದು. ಪಂಚವಾರ್ಷಿಕಯೋಜನೆ ಚರ್ಚೆಗೆ ಬಂದಾಗ ನೀವೇ ಹೇಳುತ್ತೀರಿ. 85 ಕೋಟಿ ರೂಪಾಯಿಗಳ ಯೋಜನೆಯೊಂದನ್ನು ಕೇಂದ್ರದವರು ಒಪ್ಪಿರುತ್ತಾರೆ. ನಾವು 150 ಕೋಟಿ ರೂಪಾಯಿಗಳ ಯೋಜನೆಯನ್ನಿಟ್ಟುಕೊಂಡು ಪ್ರಾರಂಭ ಮಾಡಿದೆವು. ಕೊನೆಗೆ 85 ಕೋಟಿಗೆ ಅದು ಇಳಿದಿದೆ. ಇಷ್ಟೇ ಇದ್ದರೂ ನಾವಿದಕ್ಕೆ ಹಣ ಒದಗಿಸುವುದಕ್ಕಾಗುವುದಿಲ್ಲ. Every year we are committed to the deficit expenditure of two crores of rupees because the recurring income has fallen and one of our Members (Sri Bheemappa Naik himself) is responsible for the reduced income. ಸೇಲ್ಸ್ ಟ್ಯಾಕ್ಸ್ ಆಕ್ಟಿನಿಂದ ಇನ್ನೂ ಹೆಚ್ಚಿಗೆ ಆದಾಯ ಬರುವಂತಾಗುತ್ತದೆಂದು ಒಂದು ಮಸೂದೆ ತಂದು ಅದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟರೆ ಸೆಲೆಕ್ಟ್ ಕಮಿಟಿಯವರು ಅನೇಕ ಪದಾರ್ಥಗಳಿಗೆ ವಿನಾಯಿತಿ ಕೊಟ್ಟು ಹಿಂದೆ ವರ್ಷಕ್ಕೆ ಒಂದುವರೆ ಕೋಟಿ ಬರುತ್ತಿದ್ದುದನ್ನು ಇನ್ನೂ ಇಳಿಯುವಂತೆ ಮಾಡಿಬಿಟ್ಟರು. ಈ ವರ್ಷ 30 ಲಕ್ಷರೂಪಾಯಿ ಕಡಮೆಯಾಗಿದೆ. ಹೀಗಾಗಿ, even all the taxation measures we have freshly passed within these three or four years are not helping us to fill up the deficit, leave alone finding money for expenditure for the Second Five-Year Plan. ಒಂದು ವಾಕ್ಯದಲ್ಲಿ ಹೇಳುವುದಾದರೆ, ಈ ದ್ವಿತೀಯ ಪಂಚವಾರ್ಷಿಕ ಯೋಜನೆ 85 ಕೋಟಿಯೇ ಆಗಲಿ, 125 ಕೋಟಿಯೇ ಆಗಲಿ, ನಮಗೆ ಈಗಿರುವ ಒಂದುಕೋಟಿ ಎರಡುಕೋಟಿಗಳಷ್ಟನ್ನು ಬಿಟ್ಟರೆ ಮಿಕ್ಕದ್ದನ್ನೆಲ್ಲಾ ಕೇಂದ್ರ ಸರ್ಕಾರದಿಂದ ಸಾಲವಾಗಿಯೋ, ಗ್ರಾಂಟ್ ರೂಪವಾಗಿಯೋ ತೆಗೆದುಕೊಂಡು ಖರ್ಚು ಮಾಡಲೇಬೇಕಾಗುತ್ತದೆ. All of us know it is impossible to raise during the course of five years 50 to 60 crores of rupees by way of taxation. ಹೀಗಿರುವಾಗ ನಮ್ಮಲ್ಲಿರುವ ಒಂದು ಕೋಟಿ ರೂಪಾಯಿಗಳನ್ನೇ ಇಟ್ಟುಕೊಂಡು ನಾವು ಸೌಕರ್ಯಗಳನ್ನು ಹೆಚ್ಚಿಸುತ್ತೇವೆ ಎಂದು ಹೇಳುವುದು ಸಮಂಜಸವಲ್ಲ. ಇಂಡಿಯಾ ಸರ್ಕಾರದವರು ಪ್ಲಾನಿಂಗ್ ಕಮಿಷನ್ ಎಂಬುದನ್ನು ನೇಮಿಸಿದ್ದಾರೆ. ಆ ಪ್ಲಾನಿಂಗ್ ಕಮಿಷನ್ನಿನಲ್ಲಿ ಎಲ್ಲಾ ಸಂಸ್ಥಾನಗಳ ಪ್ರತಿನಿಧಿಗಳೂ ಇದ್ದಾರೆ. ಅವರೆಲ್ಲರೂ ಸೇರಿ ಇಂಡಿಯಾದೇಶದ ಪ್ರತಿಯೊಂದು ಭಾಗವನ್ನೂ ಸಮನಾಗಿ ಮುಂದುವರಿಯುವಂತೆ ಮಾಡಬೇಕೆಂಬ ನೀತಿಯನ್ನು ಪ್ರತಿಪಾದಿಸಿದ್ದಾರೆ. ಆದ್ದರಿಂದ ಇಂಡಿಯಾ ದೇಶದಲ್ಲಿ ಎಲ್ಲಿಯೇ ಬ್ಯಾಕ್‌ವರ್ಡ್ ಪ್ರದೇಶ ಇರಲಿ, ಅದು ಮೈಸೂರೇ ಆಗಿರಲಿ, ಅಥವಾ ಧಾರವಾಡವೇ ಆಗಿರಲಿ, ಅದನ್ನು ಅಭಿವೃದ್ಧಿಗೊಳಿಸಲು ಪ್ರಯತ್ನಿಸುತ್ತಾರೆ. According to the all-India Policy, the Government of India, the Planning Commission and the National Development Council will see that greater assistance is given to such a backward area.

ತಮಗೇ ಗೊತ್ತಿದೆ, ರಾಜಪುಟಾಣ, ಮಧ್ಯಭಾರತ, ಸೌರಾಷ್ಟ್ರ ಇವುಗಳಿಗೆ ಹಣ ಕಡಮೆ ಆಗಿರುವುದರಿಂದ ಶ್ರೀ ಗ್ಯಾಡ್ಗಿಲ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿ ಕೇಂದ್ರ ಸರ್ಕಾರದಿಂದ ಹೆಚ್ಚಿಗೆ ಧನಸಹಾಯ ಒಂದು ಕೋಟಿ ಒಂದೂವರೆ ಕೋಟಿ ಕೊಡತಕ್ಕ ವ್ಯವಸ್ಥೆಮಾಡಿರುತ್ತಾರೆ. ನಾವೆಲ್ಲರೂ ಒಗ್ಗಟ್ಟಾಗಿ ಆ ರೀತಿ ಹಣ ಎಲ್ಲಿ ಇದೆಯೋ ಆ ಟ್ರೆಜರಿಗೆ ಆ ದೇವರ ಮುಂದೆ ಬೇಡಿಕೊಳ್ಳುವುದು ಬಿಟ್ಟು ಶಿವನಂಜೇಗೌಡರ ಮುಂದೆ ಹೋಗಿ ಬೇಡಿದರೇನು ಪ್ರಯೋಜನ ? ಈ ದಿವಸ ನಮಗೆ ಪ್ರತಿಯೊಂದು ಬಾಬಿಗೂ ಆ ಕೇಂದ್ರ ಸರ್ಕಾರದ ಧನಸಹಾಯ ಬರಬೇಕಾಗಿದೆ. ಹೀಗಿರುವಾಗ ನಾವು ಎಲ್ಲರೂ ಯಾವ ರೀತಿ ವರ್ತಿಸಿದ್ದಾರೋ ಹಾಗೆ ವರ್ತಿಸದೆ ನಮ್ಮ ಮೈಸೂರು ಇದ್ದಹಾಗೆಯೇ ಇರಲಿ ಎಂದು ಹೇಳಿದರೆ ನಮಗೆ ಮುಂದೆ ಅವರೇಕೆ ಸಹಾಯ ನೀಡುತ್ತಾರೆ ? ನಾವು ಅವರ ಮಾತನ್ನು ಕೇಳದೆ ಇರುವಾಗ ಅವರು ನಮ್ಮ ಮಾತನ್ನು ಕೇಳುತ್ತಾರೆಯೆ ?

ಶ್ರೀ ಎ. ವಿ. ನರಸಿಂಹರೆಡ್ಡಿ.—ಆ ಕೇಂದ್ರ ಸರ್ಕಾರದವರು ನೀಡತಕ್ಕ ಹಣ ಯಾವ ಸಂದರ್ಭದಲ್ಲಿ, ಯಾವ ಹೆಡ್ಡಿನ ಬಗ್ಗೆ, ಯಾವ ರೂಪವಾಗಿ ಅದನ್ನು ಅವರು ಕೊಡುತ್ತಾರೆ ಮತ್ತು ಹಾಗೆ ಅವರು ನೀಡಬಹುದಾದ ಹಣ ಕಾಸಿನ ಭದ್ರತೆಯ ಬಗ್ಗೆ ನಮ್ಮ ಹಣ ಕಾಸಿನ ಸ್ಥಿತಿಯೂ ಒಂದು ಸರಿಯಾದ ಸ್ಥಿತಿಯಲ್ಲಿದ್ದರೆ ತಾನೇ ಅವರು ಸಹಾಯ ನೀಡುವುದು ?

ಶ್ರೀ ಶಿವನಂಜೇಗೌಡ.—ಆ ಕೇಂದ್ರ ಸರ್ಕಾರದವರು ಕೊಡತಕ್ಕ ಹಣ ನಮ್ಮಿಂದ ಅವರು ತೆಗೆದುಕೊಂಡು ಹೋದುದೋ ಅಥವಾ ಅದನ್ನು ಬಿಟ್ಟು ಅವರೇ ಬೇರೆ ಏನಾದರೂ ಕೊಡುತ್ತಾರೋ ?

ಶ್ರೀ ಕೆ. ಹನುಮಂತಯ್ಯ.—ಶ್ರೀ ಎ. ವಿ. ನರಸಿಂಹರೆಡ್ಡಿಯವರು ಕೇಳಿದ ಪ್ರಶ್ನೆ ಬಹಳ ಸೂಕ್ತವಾಗಿದೆ. ಅದಕ್ಕೆ ಸರಿಯಾದ ಅಂಕಿ ಅಂಶಗಳನ್ನು ನಾನು ತಮಗೆ ಆ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಚರ್ಚೆಗೆ ತೆಗೆದುಕೊಂಡಾಗ ವಿಸ್ತಾರವಾಗಿ ಹೇಳುತ್ತೇನೆ. ಈ ರೀತಿಯಾಗಿ ಆ ಕೇಂದ್ರ ಸರ್ಕಾರ ಎಲ್ಲಾ ಪ್ರಾಂತ ಸರ್ಕಾರಗಳಿಗೂ ಹಣವನ್ನೊದಗಿಸಿ ಕೊಡಬೇಕಾಗಿದೆ. ಅಂಥ ಸೌಲಭ್ಯಗಳನ್ನು ಕೇಂದ್ರ ಸರ್ಕಾರ ನಮಗೀಗ ಕಲ್ಪಿಸಿಕೊಡತಕ್ಕಂಥ ಪ್ರಮೇಯ ಬಂದಿದೆ. ಆ ನೂಕು ನುಗ್ಗಲಿನಲ್ಲಿ ನಾವೇಕೆ ಹೋಗೋಣ ಎನ್ನುವುದಲ್ಲ—ಆ ರೀತಿ ಹೇಳಬೇಕಾದ್ದಿಲ್ಲ. ಆಕಾಶ ನೋಡುವುದಕ್ಕೂ ನೂಕ ನುಗ್ಗಲಿದೆಯೇ ಅಂದಹಾಗೆ, ಆ ಕೇಂದ್ರ ಸರ್ಕಾರವೆಂಬ ಮೋಡದಿಂದ ಮಳೆಗರೆಯುತ್ತಿರುವಾಗ ಆ ನೂಕು ನುಗ್ಗಲೆಲ್ಲಿದೆ? ಅಂಥ ಒಂದು ಸಂಕೋಚ ಭಾವನೆಯಾದರೂ ಏತಕ್ಕಿರಬೇಕು ? ಯಾವಾಗ ಆಕಾಶ ನೋಡಲು ನೂಕುನುಗ್ಗಲಿಲ್ಲ ಎಂದ ಮೇಲೆ ಹುಬ್ಬಳ್ಳಿಯವರೂ ನಮ್ಮ ಜೊತೆಗೆ ಬರಲಿ ; ಧಾರ್ವಾಡದವರೂ ಬರಲಿ, ಹೀಗೆ ಯಾರು ಬೇಕಾದರೂ ಬರಲಿ, ಎಲ್ಲರ ಮೇಲೂ ಮಳೆ ಒಂದೇಸಮನಾಗಿ ಕರೆಯಲಿ. ಯಾರೇ ಬಂದಾಗ್ಯೂ ನಮ್ಮ ಮೈಸೂರಿನ ಇಂಡಿವಿಜ್ಯುಯಾಲಿಟಿ ಇದ್ದೇ ಇರುತ್ತದೆ. ಆದರೆ ನಮ್ಮ ಈ ಇಂಡಿವಿಜ್ಯುಯಾಲಿಟಿ ಬಗ್ಗೆ ನಾವೇ ನಮ್ಮ ಭುಜ ತಟ್ಟಿಕೊಳ್ಳುವುದು ಬೇಡ, ನಮ್ಮ ದೇಶಕ್ಕೆ ಹೊರಗಡೆ

